Jitesh and Axar counter-attacked to ensure the momentum wasn't lost before Shreyas started to play the big shots towards the death to add muscle to the Indian total which proved enough in the end.

# ಆಸೀಸ್ ಮೇಲೆ ಭಾರತ ಆಕ್ರಮಣ

## 4-1ರಿಂದ ಸರಣಿ ವಶಪಡಿಸಿಕೊಂಡ ಆತಿಥೇಯರು, 137 ಟಿ20 ಪಂದ್ಯ ಗೆದ್ದಿರುವ ಏಕೈಕ ತಂಡ


• ಧನಂಜಯ ಆರ್, ಮಧು

**ಬೆಂಗಳೂರು:** ಐದು ಪಂದ್ಯಗಳ ಟಿ20 ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ 6 ರನ್‌ಗಳ ರೋಚಕ ಗೆಲುವು ಸಾಧಿಸಿದೆ. ಇದರೊಂದಿಗೆ ಸರಣಿಯನ್ನು ಭಾರತ ತಂಡ 4-1 ಅಂತರದಿಂದ ಕೈವಶ ಮಾಡಿಕೊಂಡಿದೆ. ವಿಶ್ವಕಪ್ ಫೈನಲ್ ಸೋಲಿನ ಬಳಿಕ ಆಸ್ಟ್ರೇಲಿಯಾ ತಂಡದ ವಿರುದ್ಧವೇ ಸರಣಿ ಗೆಲ್ಲುವ ಮೂಲಕ ಭಾರತ ತಂಡ ದಿಟ್ಟ ಉತ್ತರ ನೀಡಿದೆ. ಟಿ20 ಇತಿಹಾಸದಲ್ಲಿ ಭಾರತ ಗೆದ್ದ 137ನೇ ಪಂದ್ಯವಿದು. ಈ ಸಾಧನೆ ಮಾಡಿದ ವಿಶ್ವದ ಏಕೈಕ ತಂಡವೂ ಹೌದು.

ಉದ್ಯಾನನಗರಿಯಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಭಾರತ ತಂಡ ಶ್ರೇಯಸ್ ಐಯ್ಯರ್ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿತ್ತು. ಆಸ್ಟ್ರೇಲಿಯಾ ತಂಡ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 154 ರನ್‌ಗಳಿಸಿತು.

ಭಾರತದ ಗುರಿ ಬೆನ್ನತ್ತಿದ್ದ ಆಸೀಸ್‌ಗೆ ಟ್ರಾವಿಸ್ ಹೆಡ್ ಉತ್ತಮ ಆರಂಭ ಒದಗಿಸಿದರು. ಅವರು ಮೊದಲ ಓವರ್‌ನ ಮೂರು ಎಸೆತಗಳನ್ನು ಬೌಂಡರಿಗೆ ಅಟ್ಟಿದರು. ಆದರೆ ಮೊತ್ತ 22 ಆಗುವಷ್ಟರಲ್ಲಿ ಮುಕೇಶ್ ಮಾರಕ ದಾಳಿಗೆ ಜೋಶ್ ಫಿಲಿಫ್ ಔಟಾದರು. ನಂತರ ಮೂರನೇ ಕ್ರಮಾಂಕದಲ್ಲಿ ಆಡಳಿದ ಬೆನ್ ಮೆಕ್‌ಡರ್ಮಟ್ ಭಾರತೀಯ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ನಂತರ ಬಂದ ಏರಾನ್ (6) ಬಿಷ್ಣೋಯಿಗೆ ವಿಕೆಟ್ ನೀಡಿದರು.

ಮೆಕ್‌ಡರ್ಮಟ್ ಜತೆಗೂಡಿದ ಟಿಮ್ ಡೇವಿಡ್ (17) ಭಾರತದಿಂದ ಗೆಲುವನ್ನು ಕಸಿಯಲು ನೋಡಿದರಾದರೂ ಅಕ್ಷರ್ ಪಟೇಲ್ ಅವರನ್ನು ಹೆಚ್ಚುಹೊತ್ತು ಕ್ರೀಸ್‌ನಲ್ಲಿ ನಿಲ್ಲಲು ಬಿಡಲಿಲ್ಲ. ನಂತರ ಬಂದ ಮ್ಯಾಥ್ಯೂ ಶಾರ್ಟ್ (16) ಹಾಗೂ ನಾಯಕ ಮ್ಯಾಥ್ಯೂ ವೇಡ್ 22 ರನ್ ಗಳಿಸಿದರೂ ಭಾರತದ ಬೌಲಿಂಗ್‌ಗೆ ಸೆಡ್ಡು ಹೊಡೆಯಲು ವಿಫಲರಾದರು.




**ಭಾರತಕ್ಕೆ ಆರಂಭಿಕ ಆಘಾತ:** ಮೊದಲು ಬ್ಯಾಟಿಂಗ್ ಇಳಿದ ಟೀಂ ಇಂಡಿಯಾದ ಆರಂಭಿಕರು ಬೃಹತ್ ಮೊತ್ತ ಪೇರಿಸುವ ಭರವಸೆ ನೀಡಿದರಾದರೂ ದಿಢೀರನೆ ಔಟಾದರು. ತಂಡದ ಮೊತ್ತ 33 ಇರುವಾಗ 4ನೇ ಓವರ್‌ನಲ್ಲಿ ದಾಳಿಗಿಳಿದ ಬೆಹ್ರೆಂಡಾರ್ಫ್ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್ (21) ನಥನ್ ಎಲ್ಲಿಸ್‌ಗೆ ಕ್ಯಾಚ್ ನೀಡಿ ಔಟಾದರು. ಐದನೇ ಓವರ್‌ನಲ್ಲಿ ಮೊದಲ ಎಸೆತದಲ್ಲೇ 10 ರನ್ ಗಳಿಸಿದ್ದ ಋತುರಾಜ್ ಗಾಯಕ್ವಾಡ್ ಕೂಡ ಕ್ಯಾಚ್ ನೀಡಿ ಪೆವಿಲಿಯನ್‌ನತ್ತ ಹೆಜ್ಜೆಹಾಕಿದರು.

**ಜಿತೇಶ್, ಅಕ್ಷರ್ ಉತ್ತಮ ಜೊತೆಯಾಟ:** ರಿಂಕು ಸಿಂಗ್ ಔಟಾದ ನಂತರ ಬಂದ ಜಿತೇಶ್ ಐಯ್ಯರ್ ಜತೆ ಸೇರಿ ಉತ್ತಮ ಆಟವಾಡಿದ ಈ ಜೋಡಿ ಆಸೀಸ್ ಬೌಲರ್‌ಗಳ ಮೇಲೆ ಹಿಡಿತ ಸಾಧಿಸಿದರು. ತಂಡದ ಮೊತ್ತ ನೂರರ ಗಡಿಗೆ ಮುಟ್ಟಿಸಿದರು. ತಂಡದ ಮೊತ್ತ 97 ಆಗಿದ್ದಾಗ ಅನಗತ್ಯ ಹೊಡೆತಕ್ಕೆ ಕೈ ಹಾಕಿದ ಜಿತೇಶ್ (24) ಏರಾನ್ ಹಾರ್ಡಿಗೆ ವಿಕೆಟ್ ಒಪ್ಪಿಸಿದರು. ಈ ವೇಳೆ ಗೆ ಇಬ್ಬರಿಂದ 23 ಎಸೆತದಲ್ಲಿ 43 ರನ್ ಜೊತೆಯಾಟ ಬಂದಿತ್ತು. ನಂತರ ಬಂದ ಆಲ್ ರೌಂಡರ್ ಅಕ್ಷರ್ ಪಟೇಲ್ ಐಯ್ಯರ್‌ಗೆ ಉತ್ತಮ ಸಾಥ್ ನೀಡುವ ಮೂಲಕ ಜವಾಬ್ದಾರಿಯುತ ಆಟವಾಡಿ ತಂಡ ಮೊತ್ತವನ್ನು ಹೆಚ್ಚಿಸಿದರು. ಅಕ್ಷರ್ ಔಟಾಗುವ ಮುನ್ನ 21 ಎಸೆತದಲ್ಲಿ 31 ರನ್ ಕಾಣಿಕೆ ನೀಡಿದರು. ನಂತರ ಬಂದ ರವಿ ಬಿಷ್ಣೋಯಿ (2), ಹಾಗೂ ಅರ್ಷದೀಪ್ ಸಿಂಗ್ (2) ರನ್ ಕಾಣಿಕೆ ನೀಡಿದರು.

**ಸಂಕ್ಷಿಪ್ತ ಸ್ಕೋರ್:** ಭಾರತ 20 ಓವರ್, 160/8 (ಶ್ರೇಯಸ್ ಐಯ್ಯರ್ 53, ಅಕ್ಷರ್ ಪಟೇಲ್ 31, ಬೆಹ್ರೆಂಡಾರ್ಫ್ 38ಕ್ಕೆ 2, ಡ್ವಾರ್ಷುಯಿಸ್ 30ಕ್ಕೆ 2). ಆಸ್ಟ್ರೇಲಿಯಾ 20 ಓವರ್, 154/8 (ಮೆಕ್‌ಡರ್ಮಟ್ 54, ಟ್ರಾವಿಸ್ ಹೆಡ್ 28, ಮುಕೇಶ್ ಕುಮಾರ್ 32ಕ್ಕೆ 3, ರವಿ ಬಿಷ್ಣೋಯಿ 29ಕ್ಕೆ 2).

ಕಲಬುರಗಿ ಐಟಿಎಫ್

## ಶ್ರೇಯಸ್, ಮುಕೇಶ್ ಮಿಂಚು, ಭಾರತ ತಂಡಕ್ಕೆ 6 ರನ್ ಗೆಲುವು

# ಯಂಗ್ ಇಂಡಿಯಾಗೆ ರೋಚಕ ಜಯ

**ವಿಕ ಸುದ್ದಿಲೋಕ** ಬೆಂಗಳೂರು

ಅಂತಿಮ ಕ್ಷಣದ ಒತ್ತಡವನ್ನು ನಿಭಾಯಿಸುವಲ್ಲಿ ಯಶಸ್ವಿಯಾದ ಯಂಗ್ ಇಂಡಿಯಾ ಐದನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 6 ರನ್‌ಗಳಿಂದ ರೋಚಕ ಗೆಲುವು ದಾಖಲಿಸಿತು. ಇದರೊಂದಿಗೆ ಐದು ಪಂದ್ಯಗಳ ಟಿ20 ಸರಣಿಯನ್ನು 4-1 ಅಂತರದಲ್ಲಿ ಸೂರ್ಯಕುಮಾರ್ ಯಾದವ್ ಬಳಗ ವಶಪಡಿಸಿಕೊಂಡಿತು.

161 ರನ್ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ, 20 ಓವರ್‌ಗಳಲ್ಲಿ 8 ವಿಕೆಟ್‌ಗೆ 154 ರನ್ ಗಳಿಸಲಷ್ಟೇ ಶಕ್ತಗೊಂಡಿತು. ಅಂತಿಮ ಓವರ್‌ನಲ್ಲಿ ಆಸೀಸ್ ಗೆಲ್ಲಲು 10 ರನ್ ಅಗತ್ಯವಿದ್ದಾಗ ಭಾರತೀಯರಲ್ಲಿ ತಳಮಳ ಸುರುವಾಯಿತು. ಆದರೆ ಕೇವಲ 3 ರನ್ ಬಿಟ್ಟುಕೊಟ್ಟ ಅರ್ಶ್‌ದೀಪ್, ತಂಡಕ್ಕೆ 6 ರನ್‌ಗಳ ರೋಚಕ ಗೆಲುವಿಗೆ ಕಾರಣರಾದರು. ಪ್ರಮುಖ ಆಟಗಾರರ ಸೇವೆ ಇಲ್ಲದೆ ಆಡಿದ ಆಸೀಸ್, ಸೋಲಿನೊಂದಿಗೆ ಸುಮಾರು 2 ತಿಂಗಳಿಗೂ ದೀರ್ಘಾವಧಿಯ ಭಾರತದ ಪ್ರವಾಸವನ್ನು ಕೊನೆಗೊಳಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಟಾಸ್ ಸೋತು ಬ್ಯಾಟಿಂಗ್‌ಗೆ ಆಹ್ವಾನ ಪಡೆದ ಆತಿಥೇಯ ತಂಡ ಆರಂಭಿಕ ಆಘಾತಕ್ಕೆ ಗುರಿಯಾಯಿತು. 9.1 ಓವರ್‌ಗಳಲ್ಲಿ ಕೇವಲ 55 ರನ್‌ಗಳಿಗೆ ಅಗ್ರ ಕ್ರಮಾಂಕದ 4 ವಿಕೆಟ್ ಒಪ್ಪಿಸಿದ ಟೀಮ್ ಇಂಡಿಯಾ, ಮೂರಂಕಿ ಗಡಿ ದಾಟುವುದಕ್ಕೂ ಭೀತಿ ಎದುರಿಸಿತು.

ಐದು ಪಂದ್ಯಗಳ ಸರಣಿಯನ್ನು ಈಗಾಗಲೇ 3-1 ಅಂತರದಲ್ಲಿ ಭಾರತ ತಂಡ ವಶಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ರಿಂಕು ಸಿಂಗ್ ಒಂದಂಕಿ ಮೊತ್ತಕ್ಕೆ ಸೀಮಿತರಾದರು. ಈ ಹಂತದಲ್ಲಿ ಟೀಮ್ ಇಂಡಿಯಾ ಭವಿಷ್ಯದ ಬ್ಯಾಟಿಂಗ್ ಶಕ್ತಿಯಾಗಿ ರೂಪುಗೊಂಡಿರುವ ಶ್ರೇಯಸ್ ಅಯ್ಯರ್ ತಂಡಕ್ಕೆ ಆಸರೆಯಾದರು.

ಐದನೇ ವಿಕೆಟ್‌ಗೆ ಜಿತೇಶ್ ಶರ್ಮ ಜತೆ ಇನಿಂಗ್ಸ್ ಕಟ್ಟಬೇಕಾದ ಜವಾಬ್ದಾರಿ ಹೊತ್ತ ಮುಂಬಯಿನ ಅಯ್ಯರ್, ರಕ್ಷಣಾತ್ಮಕ ಆಟದೊಂದಿಗೆ ಆಸೀಸ್ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಈ ಮಧ್ಯೆ, ಕೇವಲ 16 ಎಸೆತಗಳಲ್ಲಿ 3 ಫೋರ್, 1 ಸಿಕ್ಸರ್ ಒಳಗೊಂಡ 24 ರನ್ ಗಳಿಸಿದ ವಿಕೆಟ್ ಕೀಪರ್ ಜಿತೇಶ್, ಆ್ಯರೋನ್ ಹಾರ್ಡಿಗೆ ವಿಕೆಟ್ ಒಪ್ಪಿಸಿದರು. ಹೀಗಾಗಿ 42 ರನ್‌ಗಳ ಐದನೇ ವಿಕೆಟ್ ಜತೆಯಾಟ ಕೊನೆಗೊಂಡಿತು.

ಕಳೆದ ವಿಶ್ವಕಪ್‌ನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ನೆದರ್ಲೆಂಡ್ಸ್ ವಿರುದ್ಧದ ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿದ್ದ ಅಯ್ಯರ್, ಆಲ್‌ರೌಂಡರ್ ಅಕ್ಷರ್ ಪಟೇಲ್ ಜತೆ ಆರನೇ ವಿಕೆಟ್‌ಗೂ ಅಮೂಲ್ಯದ ಜತೆಯಾಟ ನಿರ್ವಹಿಸಿದರು. ಈ ಜೋಡಿ 46 ರನ್ ಕೂಡಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಲು ನೆರವಾಯಿತು. 31 ರನ್ ಗಳಿಸಿದ ಅಕ್ಷರ್, ಬೆಹ್ರಾಂಡಾರ್ಫ್‌ಗೆ ವಿಕೆಟ್ ಒಪ್ಪಿಸಿದರು. 37 ಎಸೆತಗಳಲ್ಲಿ 5 ಫೋರ್, 2 ಸಿಕ್ಸರ್ ಸಹಿತ 53 ರನ್ ಗಳಿಸಿದ ಅಯ್ಯರ್ ಕೊನೆಯ 3 ಎಸೆತಗಳು ಬಾಕಿ ಇರುವಾಗ ಪೆವಿಲಿಯನ್ ಸೇರಿದರು. ಆಸೀಸ್ ಪರ ಬೆಹ್ರಾಂಡಾರ್ಫ್ ಮತ್ತು ಬೆನ್ ತಲಾ 2 ವಿಕೆಟ್ ಕಿತ್ತರು.


### ಸಂಕ್ಷಿಪ್ತ ಸ್ಕೋರ್

**ಭಾರತ:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 160 (ಶ್ರೇಯಸ್ ಅಯ್ಯರ್ 53, ಅಕ್ಷರ್ ಪಟೇಲ್ 31, ಜಿತೇಶ್ ಶರ್ಮ 24, ಯಶಸ್ವಿ ಜೈಸ್ವಾಲ್ 21; ಬೆಹ್ರಾಂಡಾರ್ಫ್ 38ಕ್ಕೆ 2, ಬೆನ್ ದ್ವಾರ್ಶುಯಿಸ್ 30ಕ್ಕೆ 2).

**ಆಸ್ಟ್ರೇಲಿಯಾ:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 154 (ಮೆಕ್‌ಡಾರ್ಮೆಟ್ 54, ಟ್ರಾವಿಸ್ 28, ಮ್ಯಾಥ್ಯೂ ವೇಡ್ 22; ಮುಕೇಶ್ 32ಕ್ಕೆ 3, ಬಿಷ್ಣೋಯಿ 29ಕ್ಕೆ 2, ಅರ್ಶ್‌ದೀಪ್ 40ಕ್ಕೆ 2).

### ಭಾರತದ ಮುಂದಿನ ಸರಣಿ

**ದಕ್ಷಿಣ ಆಫ್ರಿಕಾ ಪ್ರವಾಸ: ಡಿಸೆಂಬರ್ 10ರಿಂದ ಜನವರಿ 7ರವರೆಗೆ. 3 ಟಿ20, 3 ಏಕದಿನ ಮತ್ತು ಎರಡು ಟೆಸ್ಟ್ ಪಂದ್ಯಗಳ ಸರಣಿ.**



ಶ್ರೇಯಸ್ ಅಯ್ಯರ್

# ಮಯಾಂಕ್ ಬಳಗಕ್ಕೆ ಮೊದಲ ಸೋಲು

## ವಿಜಯ್ ಹಜಾರೆ ಟ್ರೋಫಿ | ಹರಿಯಾಣ ಎದುರು ಕೈಕೊಟ್ಟ ಬ್ಯಾಟಿಂಗ್

**ಅಹಮದಾಬಾದ್:** ಬ್ಯಾಟರ್ ದೇವದತ್ ಪಡಿಕಲ್ ಹಾಗೂ ವೇಗಿ ವಿದ್ವತ್ ಕಾವೇರಪ್ಪ ಗೈರಿನಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ವೈಫಲ್ಯ ಅನುಭವಿಸಿದ ಕರ್ನಾಟಕ ತಂಡ ದೇಶೀಯ ಏಕದಿನ ಟೂರ್ನಿ ವಿಜಯ್ ಹಜಾರೆ ಟ್ರೋಫಿಯಲ್ಲಿ ಹರಿಯಾಣ ಎದುರು 5 ವಿಕೆಟ್‌ಗಳಿಂದ ಪರಾಭವಗೊಂಡಿದೆ. ಟೂರ್ನಿಯಲ್ಲಿ ಮೊದಲ ಸೋಲುಂಡ ಮಯಾಂಕ್ ಅಗರ್ವಾಲ್ ಬಳಗ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿ ಉಳಿದಿದ್ದು, ನಾಕೌಟ್ ಹಂತಕ್ಕೇರುವ ಆಸೆಯೂ ಜೀವಂತವಿದೆ. ಕರ್ನಾಟಕದ ಅಜೇಯ ಓಟಕ್ಕೆ ಬ್ರೇಕ್ ಹಾಕಿದ ಹರಿಯಾಣ ಸತತ 6ನೇ ಗೆಲುವಿನೊಂದಿಗೆ ಕ್ವಾರ್ಟರ್‌ಫೈನಲ್ ಸ್ಥಾನ ಖಚಿತಪಡಿಸಿಕೊಂಡಿದೆ.

ಭಾನುವಾರ ನಡೆದ ಸಿ ಗುಂಪಿನ ತನ್ನ 6ನೇ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್‌ಗೆ ಇಳಿದ ಕರ್ನಾಟಕಕ್ಕೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕೈಕೊಟ್ಟರು. ಬಳಿಕ ಬಾಲಂಗೋಚಿ ವೈಶಾಕ್ ವಿಜಯ್ ಕುಮಾರ್ (54 ರನ್, 61 ಎಸೆತ, 4 ಬೌಂಡರಿ, 4 ಸಿಕ್ಸರ್) ಅರ್ಧಶತಕದ ಹೋರಾಟದ ನಡುವೆ 43.5 ಓವರ್‌ಗಳಲ್ಲಿ 143 ರನ್‌ಗಳಿಗೆ ಆಲೌಟ್ ಆಯಿತು. ಸಾಧಾರಣ ಮೊತ್ತ ಬೆನ್ನಟ್ಟಿದ್ದ ಹರಿಯಾಣ, ವಿಕೆಟ್ ಕೀಪರ್-ಬ್ಯಾಟರ್ ರೋಹಿತ್ ಶರ್ಮ (63 ರನ್, 70 ಎಸೆತ, 7 ಬೌಂಡರಿ, 1 ಸಿಕ್ಸರ್) ಅರ್ಧಶತಕದ ನೆರವಿನಿಂದ 31.1 ಓವರ್‌ಗಳಲ್ಲಿ 5 ವಿಕೆಟ್‌ಗೆ 144 ರನ್‌ಗಳಿಸಿ ಸುಲಭ ಗೆಲುವು ದಾಖಲಿಸಿತು. ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ಭಾರತ ಎ ತಂಡಕ್ಕೆ ಆಯ್ಕೆಯಾಗಿರುವ ದೇವದತ್ ಪಡಿಕಲ್, ವಿದ್ವತ್ ಕಾವೇರಪ್ಪ ಟೂರ್ನಿಯ ಇತರ ಪಂದ್ಯಗಳಿಗೆ ಕರ್ನಾಟಕ ತಂಡಕ್ಕೆ ಅಲಭ್ಯರಾಗಿದ್ದಾರೆ. **ಕರ್ನಾಟಕ: 43.5 ಓವರ್‌ಗಳಲ್ಲಿ 143** (ಮಯಾಂಕ್ 0, ಸಮರ್ಥ್ 1, ಬಿಆರ್ ಶರತ್ 15, ಮನೀಷ್ 24, ಜೆ. ಸುಚಿತ್ 12, ವೈಶಾಕ್ 54, ಸುಮಿತ್ 28ಕ್ಕೆ3, ಚಾಹಲ್ 16ಕ್ಕೆ 2). **ಹರಿಯಾಣ: 31.1 ಓವರ್‌ಗಳಲ್ಲಿ 144** (ಯುವರಾಜ್ 19, ನಿಶಾಂತ್ 43, ರೋಹಿತ್ 63, ವಿ. ಕೌಶಿಕ್ 9ಕ್ಕೆ2, ಜೆ. ಸುಚಿತ್ 37ಕ್ಕೆ 2).




**ಕರ್ನಾಟಕ ಮುಂದಿನ ಪಂದ್ಯ**

ಎದುರಾಳಿ: **ಮಿಜೋರಾಂ**

ಯಾವಾಗ: **ಮಂಗಳವಾರ**

ಆರಂಭ: **ಬೆಳಗ್ಗೆ 9**

# ಭಾರತೀಯರ ನಾಕೌಟ್ ಕನಸು ನುಚ್ಚುನೂರು

**ಸ್ಯಾಂಟಿಯಾಗೊ:** ಭಾರತೀಯ ತಂಡ ಇಲ್ಲಿ ನಡೆದಿರುವ ಎಫ್‌ಐಎಚ್ ಜ್ಯೂನಿಯರ್ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಯಿಂದ ನಿರ್ಗಮಿಸಿದೆ.

ಟೂರ್ನಿಯ ನಾಲ್ಕನೇ ದಿನದಂದು ನಡೆದ ತನ್ನ ಅಂತಿಮ ಲೀಗ್ ಪಂದ್ಯದಲ್ಲಿ ಭಾರತ ತೀವ್ರ ಪೈಪೋಟಿಯ ನಂತರ ಬೆಲ್ಜಿಯಂ ಎದುರು 3–2 ಗೋಲುಗಳಿಂದ ಪರಾಭವ ಕಂಡಿತು.

ಈ ಗೆಲುವಿನೊಂದಿಗೆ ಬೆಲ್ಜಿಯಂ 'ಸಿ' ಗುಂಪಿನ ಅಗ್ರಸ್ಥಾನಕ್ಕೇರಿತು. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಜರ್ಮನಿ ಕೆನಡಾದ ಎದುರು ಬೃಹತ್ ಗೆಲುವು ದಾಖಲಿಸಿ ಎರಡನೇಯದಾಯಿತು.

ಶನಿವಾರ ರಾತ್ರಿ ನಡೆದ ಮೊದಲ ಪಂದ್ಯದಲ್ಲಿ ಭಾರತ ಹಾಗೂ ಬೆಲ್ಜಿಯಂಗಳು ಸಮಬಲದ ಹೋರಾಟ ಪ್ರದರ್ಶಿಸಿದವು. ಶ್ರುವರ್ಸ್ ಐದನೇ ನಿಮಿಷದಲ್ಲಿ ಬೆಲ್ಜಿಯಂಗೆ ಲೀಡ್ ನೀಡಿದರೆ, ಪ್ರಾನ್ಸ್ ಡಿ ಮೊಟ್ ತಂಡದ ಮುನ್ನಡೆಯನ್ನು 2–0ಗೆ ಏರಿಸಿದರು. ಪಂದ್ಯಾವಳಿಯಲ್ಲಿ ಭಾರತದ ಪರ ಉತ್ಕೃಷ್ಟ ಪ್ರದರ್ಶನ ನೀಡಿದ ಅನ್ನು ನಂತರ ಐದು ನಿಮಿಷಗಳ ಅಂತರದಲ್ಲಿ ಎರಡು ಗೋಲು ಬಾರಿಸಿ ಸ್ಕೋರನ್ನು 2–2ರ ಸಮಸ್ಥಿತಿಗೆ ತಂದರು. ಆದರೆ ಪಂದ್ಯದ 52ನೇ ನಿಮಿಷದಲ್ಲಿ ಅಸ್ತಿದ್ ಬೊನಾಮಿ ಬಾರಿಸಿದ ಗೋಲು 'ಸಿ' ಗುಂಪಿನ ಅಗ್ರಸ್ಥಾನದೊಡನೆ ನಾಕೌಟ್ ಪ್ರವೇಶಿಸುವ ಭಾರತದ ಕನಸನ್ನು ನುಚ್ಚುನೂರಾಗಿಸಿತು.

ಭಾರತದೊಡನೆ ದಕ್ಷಿಣ ಆಫ್ರಿಕ ಸಹ ಪಂದ್ಯಾವಳಿಯಿಂದ ಹೊರ ಬಿದ್ದಿತು. ಆದರೆ 'ಎ' ಹಾಗೂ 'ಸಿ' ಗುಂಪುಗಳಿಂದ ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಬೆಲ್ಜಿಯಂ ಹಾಗೂ ಜರ್ಮನಿಗಳು ಅಂತಿಮ ಎಂಟರ ಹಂತ ಪ್ರವೇಶಿಸಿದವು.



# ಭಾರತ ಹಾಕಿ ತಂಡಕ್ಕೆ ಹರ್ಮನ್‌ಪ್ರೀತ್ ನಾಯಕ

ನವದೆಹಲಿ: ಐದು ರಾಷ್ಟ್ರಗಳ ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿರುವ ಭಾರತ ತಂಡವನ್ನು ಹರ್ಮನ್‌ಪ್ರೀತ್ ಸಿಂಗ್ ಮುನ್ನಡೆಸಲಿದ್ದಾರೆ.

ಡಿಸೆಂಬರ್ 15 ರಿಂದ 22 ರ ವರೆಗೆ ಸ್ಪೇನ್‌ನ ವೆಲೆನ್ಸಿಯಾದಲ್ಲಿ ನಡೆಯಲಿರುವ ಪಂದ್ಯಾವಳಿಗೆ 24 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದೆ.

ಭಾರತ ತಂಡವು ಯುವ ಹಾಗೂ ಅನುಭವಿ ಆಟಗಾರರನ್ನೊಳಗೊಂಡಿದ್ದು, ಸುಮಿತ್ ಮತ್ತು ಅಮಿತ್ ರೋಹಿದಾಸ್ ಅವರನ್ನು ಉಪನಾಯಕರನ್ನಾಗಿ ನೇಮಿಸಲಾಗಿದೆ.

2023-24ರ ಹಾಕಿ ಪ್ರೊ ಲೀಗ್ ಋತುವಿನ ಪೂರ್ವಭಾವಿಯಾಗಿ ನಡೆಯಲಿರುವ ಪಂದ್ಯಾವಳಿಯಲ್ಲಿ ಭಾರತ ತಂಡವಲ್ಲದೇ ಸ್ಪೇನ್, ಜರ್ಮನಿ, ಫ್ರಾನ್ಸ್ ಹಾಗೂ ಬೆಲ್ಜಿಯಂ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ.

ಗೋಲ್‌ಕೀಪರ್ ಸ್ಥಾನಕ್ಕೆ ಪಿ.ಆರ್.ಶ್ರೀಜೇಶ್ ಮತ್ತು ಕ್ರಿಶನ್ ಬಿ ಪಾಠಕ್ ಅಲ್ಲದೇ ಸೂರಜ್ ಕರ್ಕೇರಾ ಅವರನ್ನು ಆಯ್ಕೆ ಮಾಡಲಾಗಿದ್ದು, ಪಿ.ಆರ್.ಶ್ರೀಜೇಶ್ ಮತ್ತು ಕ್ರಿಶನ್ ಬಿ ಪಾಠಕ್ ಹೆಚ್ಚು ಪಂದ್ಯ ಆಡುವ ಸಾಧ್ಯತೆಗಳಿವೆ.

ರಕ್ಷಣೆಯಲ್ಲಿ, ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಜುಗ್ರಾಜ್ ಸಿಂಗ್, ರೋಹಿದಾಸ್, ವರುಣ್ ಕುಮಾರ್, ಸುಮಿತ್, ಸಂಜಯ್ ಮತ್ತು ನಿಲಮ್ ಸಂಜೀಪ್ ಕ್ಸೆಸ್ ಅವರೊಂದಿಗೆ ನಾಯಕತ್ವದ ಜವಾಬ್ದಾರಿಯನ್ನು ನಿರ್ವಹಿಸಲಿದ್ದಾರೆ.

# ಕಲಬುರಗಿ ಓಪನ್ ಗೆದ್ದ ರಾಮ್‌ಕುಮಾರ್

■ ಕೃಷ್ಣ ಕುಲಕರ್ಣಿ ಕಲಬುರಗಿ

ಐದನೇ ಶ್ರೇಯಾಂಕಿತ ಆತಿಥೇಯ ಭಾರತದ ಆಟಗಾರ ರಾಮ್‌ಕುಮಾರ್ ರಾಮನಾಥನ್ ಐಟಿಎಫ್ ಕಲಬುರಗಿ ಓಪನ್ ಪುರುಷರ ವರ್ಲ್ಡ್ ಟೂರ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಈ ಮೂಲಕ 57 ದಿನಗಳ ಅಂತರದಲ್ಲಿ 3 ಐಟಿಎಫ್ ಪ್ರಶಸ್ತಿ ಜಯಿಸಿದ ಸಾಧನೆ ಮಾಡಿದ್ದಾರೆ.

ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಲಾನ್ ಟೆನಿಸ್ ಅಂಕಣದಲ್ಲಿ ಭಾನುವಾರ ಬೆಳಗ್ಗೆ ನಡೆದ ಫೈನಲ್ ಪಂದ್ಯದಲ್ಲಿ ರಾಮ್‌ಕುಮಾರ್, 7ನೇ ಶ್ರೇಯಾಂಕಿತ ಆಸ್ಟ್ರಿಯಾದ ಡೇವಿಡ್ ಪಿಚ್‌ಲೇರ್ ಅವರನ್ನು 6-2, 6-1 ನೇರ ಸೆಟ್‌ಗಳಿಂದ ಮಣಿಸಿದರು. ಆರಂಭದಲ್ಲಿ ಇಬ್ಬರೂ ಸಮಬಲದ ಹೋರಾಟ ನಡೆಸಿದರೂ, ರಾಮ್‌ಕುಮಾರ್ ನಿರಂತರ ಪಾಯಿಂಟ್ ಪಡೆಯುವ ಮೂಲಕ ಮುನ್ನಡೆ ಸಾಧಿಸಿದರು. ಒಂದು ಗಂಟೆ, 4 ನಿಮಿಷಗಳಲ್ಲಿ ರಾಮ್‌ಕುಮಾರ್ ಗೆಲುವು ಒಲಿಸಿಕೊಂಡರು. ಚಾಂಪಿಯನ್ ರಾಮ್ ಕುಮಾರ್ 3 ಲಕ್ಷ ರೂ. ನಗದು ಬಹುಮಾನದೊಂದಿಗೆ 25 ಎಟಿಪಿ ಪಾಯಿಂಟ್ ಸಂಪಾದಿಸಿದರು. ರನ್ನರ್ ಅಪ್ ಡೇವಿಡ್ ಪಿಚ್‌ಲೇರ್ 1.76 ಲಕ್ಷ ರೂ. ಮತ್ತು 16 ಎಟಿಪಿ ಅಂಕ ಗಳಿಸಿದರು.

## ಒಂದೇ ವರ್ಷ ಮೂರು ಪ್ರಶಸ್ತಿ

**ಚೆನ್ನೈನ 29 ವರ್ಷದ ಎಡಗೈ ಆಟಗಾರ ರಾಮ್‌ಕುಮಾರ ರಾಮನಾಥನ್ ಒಂದೇ ವರ್ಷದಲ್ಲಿ 3 ಐಟಿಎಫ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ. ಅಕ್ಟೋಬರ್‌ನಲ್ಲಿ ಧಾರವಾಡದಲ್ಲಿ ನಡೆದ ಐಟಿಎಫ್ ಟೂರ್ನಿಯ ಫೈನಲ್‌ನಲ್ಲಿ ದೇಶಬಾಂಧವ ದಿಗ್ವಿಜಯ್ ಪ್ರತಾಪ್ ಸಿಂಗ್‌ರನ್ನು ಮಣಿಸಿದ್ದರು. ಮುಂಬೈನಲ್ಲಿ ನವೆಂಬರ್‌ನಲ್ಲಿ ನಡೆದ ಐಟಿಎಫ್ ಟೂರ್ನಿಯ ಫೈನಲ್‌ನಲ್ಲಿ ವಿಶ್ವಕರ್ಮರನ್ನು ಸೋಲಿಸಿದ್ದರು. ಕಳೆದ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಅವರು ರಜತ ಪದಕಕ್ಕೆ ಕೊರಳೊಡ್ಡಿದ್ದರು.**



# ಬೆಂಗಳೂರು ಬುಲ್ಸ್‌ಗೆ ಆಘಾತ

**ಅಹ್ಮದಾಬಾದ್:** ಬೆಂಗಳೂರು ಬುಲ್ಸ್ 10ನೇ ಪ್ರೊ ಕಬಡ್ಡಿ ಋತುವನ್ನು ಸೋಲಿನೊಂದಿಗೆ ಆರಂಭಿಸಿದೆ. ಹಾವು ಏಣಿಯಾಟದಂತೆ ಸಾಗಿದ ಭಾನುವಾರದ ದ್ವಿತೀಯ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 34–31 ಅಂತರದಿಂದ ಬುಲ್ಸ್‌ಗೆ ತಿವಿಯಿತು. ಇದು ಗುಜರಾತ್‌ಗೆ ಒಲಿದ ಸತತ 2ನೇ ಜಯ. ವಿರಾಮದ ವೇಳೆ ಬುಲ್ಸ್ 20–14ರ ಮುನ್ನಡೆಯಲ್ಲಿತ್ತು. ಅನಂತರವೂ ಪೈಪೋಟಿ ತೀವ್ರಗೊಂಡಿತು. ಗುಜರಾತ್ ಪರ ರೈಡರ್ ರಾಕೇಶ್, ಡಿಫೆಂಡರ್ ಸೋಮ್‌ಬೀರ್ ತಲಾ 5 ಅಂಕ ಸಂಪಾದಿಸಿದರು. ಬುಲ್ಸ್ ಪರ ಮಿಂಚಿದವರೆಂದರೆ ರೈಡರ್‌ಗಳಾದ ಭರತ್ (7 ಅಂಕ) ಮತ್ತು ವಿಕಾಸ್ ಖಂಡೋಲ (6 ಅಂಕ). ಭಾನುವಾರದ ಮೊದಲ ಪಂದ್ಯದಲ್ಲಿ ತಮಿಳ್ ತಲೈವಾಸ್ 42–31 ಅಂಕಗಳ ಅಂತರದಿಂದ ದಬಾಂಗ್ ಡೆಲ್ಲಿಯನ್ನು ಕೆಡವಿತು. ವಿರಾಮದ ವೇಳೆ 18–14ರ ಮುನ್ನಡೆಯಲ್ಲಿದ್ದ ತಲೈವಾಸ್ ದ್ವಿತೀಯಾರ್ಧದಲ್ಲೂ ಈ ಮುನ್ನಡೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಯಿತು. 21 ಅಂಕ ಬಾಚಿದ ರೈಡರ್ ಅಜಿಂಕ್ಯ ತಮಿಳ್ ತಲೈವಾಸ್ ಗೆಲುವಿನ ರೂವಾರಿ ಎನಿಸಿದರು. 14 ಟಚ್ ಪಾಯಿಂಟ್, 4 ಬೋನಸ್ ಪಾಯಿಂಟ್ ಮತ್ತು 3 ಟ್ಯಾಕಲ್ ಪಾಯಿಂಟ್‌ಗಳು ಒಳಗೊಂಡಿದ್ದವು. ಮತ್ತೋರ್ವ ರೈಡರ್ ನರೇಂದರ್ 8 ಅಂಕ ಗಳಿಸಿ ಕೊಟ್ಟರು. ದಬಾಂಗ್ ಡೆಲ್ಲಿ ಪರ ನಾಯಕ, ರೈಡರ್ ನವೀನ್ ಕುಮಾರ್ 14 ಅಂಕ ಗಳಿಸಿ ಮಿಂಚಿದರು. ಮತ್ತೋರ್ವ ರೈಡರ್ ಆಶು ಮಲಿಕ್ 9 ಅಂಕ ತಂದಿತ್ತರು.



# ಭಾರತದ ರಾಮಕುಮಾರ ಚಾಂಪಿಯನ್

## ಐಟಿಎಫ್ ಮೆನ್ಸ್ ಕಲಬುರಗಿ ಓಪನ್-2023 ಮುಕ್ತಾಯ | ಪುರುಷರ ಡಬಲ್ಸ್‌ನಲ್ಲಿ ಜಪಾನ್ ಜೋಡಿ ಸಾಧನೆ




**ಕಲಬುರಗಿ: ಐಟಿಎಫ್ ಮೆನ್ಸ್ ಕಲಬುರಗಿ ಓಪನ್ 2023 ಸಿಂಗಲ್ಸ್ ಚಾಂಪಿಯನ್‌ರಾಗಿ ಹೊರ ಹೊಮ್ಮಿದ ಭಾರತದ ರಾಮಕುಮಾರ ರಾಮನಾಥನ್‌ರಿಗೆ ಸಚಿವ ಪ್ರಿಯಾಂಕ್ ಖರ್ಗೆ ಬಹುಮಾನ ವಿತರಿಸಿದರು.**

**ಕಲಬುರಗಿ:** ನಿರೀಕ್ಷೆಯಂತೆ ರವಿವಾರ ನಡೆದ ಐಟಿಎಫ್ ಮೆನ್ಸ್ ಕಲಬುರಗಿ ಓಪನ್-2023 ಸಿಂಗಲ್ಸ್ ಫೈನಲ್‌ದಲ್ಲಿ ಭಾರತದರಾಮಕುಮಾರರಾಮನಾಥನ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ನಗರದ ಚಂದ್ರಶೇಖರ ಪಾಟೀಲ್ ಜಿಲ್ಲಾಕ್ರೀಡಾಂಗಣದಲ್ಲಿರವಿವಾರನಡೆದ ಪಂದ್ಯದಲ್ಲಿಆಸ್ಟ್ರಿಯಾದ ಡೇವಿಡ್ ಪಿಚ್ಲರ್ ವಿರುದ್ಧ 6-2, 6-1 ನೇರ ಸೆಟ್‌ಗಳಿಂದ ಗೆಲ್ಲುವ ಮೂಲಕ ರಾಮಕುಮಾರ್ ಪ್ರಶಸ್ತಿಗೆ ಮುತ್ತಿಕ್ಕಿದರು. ಈ ಗೆಲುವಿನ ಟ್ರೋಫಿಯೊಂದಿಗೆ 3,600 ಯುಎಸ್ ಡಾಲರ್ ಮೊತ್ತ ಹಾಗೂ 25 ಎಟಿಪಿ ಪಾಯಿಂಟ್ ಪಡೆದರು. ಫೈನಲ್‌ನಲ್ಲಿ ಸೋಲು ಕಂಡ ಆಸ್ಟ್ರಿಯಾದ ಡೇವಿಡ್ ಪಿಚ್ಲರ್‌ಗೆ 2,120 ಯುಎಸ್ ಡಾಲರ್ ಹಾಗೂ 16 ಎಟಿಪಿ ಪಾಯಿಂಟ್ ಪಡೆದರು.

**ಆಕ್ರಮಣಕಾರಿ ಆಟ:** ಪಂದ್ಯಾವಳಿಯುದ್ದಕ್ಕೂ ಆಕ್ರಮಣಕಾರಿ ಆಟವಾಡಿದ ರಾಮನಾಥನ್ ಫೈನಲ್ ಪಂದ್ಯದಲ್ಲೂ ಆಟವಾಡಿ ಗಮನ ಸೆಳೆದರು. ರಾಮನಾಥನ್ ಮೊದಲ ಪಾಯಿಂಟ್‌ನಲ್ಲಿ ಮಾತ್ರ ಕೊಂಚ ಸಡಿಲ ಬಿಟ್ಟಿದ್ದರು. ಎರಡನೇ ಗೇಮ್‌ನಿಂದ ಆಕ್ರಮಣಕಾರಿ ಆಟ ಪ್ರದರ್ಶಿಸಿದ ರಾಮನಾಥನ್ ಎದುರಾಳಿಗೆ ಕೇವಲ 2 ಗೇಮ್ ಮಾತ್ರ ಬಿಟ್ಟುಕೊಂಡು 6-2ರಲ್ಲಿ ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಇನ್ನೂ ಎರಡನೇ ಸೆಟ್‌ನಲ್ಲಿಯೂ ಆಕ್ರಮಣ ಮುಂದುವರಿಸಿ 6-1ರಲ್ಲಿ ಸೆಟ್ ಗೆಲ್ಲುವ ಮೂಲಕ ಸತತ ಮೂರನೇ ಎಟಿಪಿ ಟ್ರೋಫಿ ತಮ್ಮದಾಗಿಸಿಕೊಂಡರು. ರಾಮನಾಥನ್ ಈಗಾಗಲೇ ಧಾರವಾಡ, ಮುಂಬೈ ಎಟಿಪಿಗಳಲ್ಲಿ ಗೆಲುವು ಸಾಧಿಸಿದ್ದಾರೆ. ಇದೀಗ ಕಲಬುರಗಿಯಲ್ಲಿ ಮೂರನೇಟ್ರೋಫಿಎತ್ತಿ ಹಿಡಿದುದಾಖಲೆ ನಿರ್ಮಿಸಿದರು.

**ಬಾಲ್ ಬಾಯ್‌ಗಳಿಗೆ ಪ್ರಶಂಸೆ:** ಪ್ರಶಸ್ತಿ ಪ್ರದಾನಸಮಾರಂಭದಲ್ಲಿಬಾಲ್ ಬಾಯ್‌ಗಳ ಕಾರ್ಯವನ್ನು ಎಲ್ಲರೂ ಶ್ಲಾಘಿಸಿದರು. 25,000 ನಗದು ಬಹುಮಾನವಾಗಿ ವಿತರಿಸಲಾಯಿತು.

ಶನಿವಾರ ನಡೆದಿದ್ದ ಐಟಿಎಫ್ ಕಲಬುರಗಿ ಓಪನ್ 2023ರ ಪುರುಷರ ಡಬಲ್ಸ್ ಫೈನಲ್‌ನ ರೋಮಾಂಚಕ ಪಂದ್ಯದಲ್ಲಿ ಜಪಾನ್ ಜೋಡಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಡಬಲ್ಸ್‌ನಲ್ಲಿಭಾರತದನಿತೀಶ್ ಕುಮಾರ್ ಸಿನ್ಹ ಮತ್ತು ಆಸ್ಟ್ರಿಯಾದ ಡೇವಿಡ್ ಪಿಚ್ಲರ್ ಜೋಡಿಯನ್ನು ಫೈನಲ್‌ನಲ್ಲಿ ಮಣಿಸುವ ಮೂಲಕ ಜಪಾನಿನ ರುಯುಕಿ ಮತ್ಸುಡಾ ಮತ್ತು ರಿಯೊಟಾರೊ ತಗುಚಿ ಜೋಡಿಯು ಚಾಂಪಿಯನ್ ಆಗಿ ಹೊರಹೊಮ್ಮಿ ಟ್ರೋಫಿ ಪಡೆದಿದೆ.

**ಬಹುಮಾನ ವಿತರಣೆ:** ವಾರ ಕಾಲ ನಡೆದ ಐಟಿಎಫ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದವರಿಗೆ ಗ್ರಾಮೀಣಾಭಿವೃದ್ಧಿಹಾಗೂಪಂಚಾಯತ್ ರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ. ಪ್ರಿಯಾಂಕ್ ಖರ್ಗೆ ಟ್ರೋಫಿ ಹಾಗೂ ಬಹುಮಾನ ವಿತರಿಸಿದರು.

ನಂತರ ಮಾತನಾಡಿದ ಸಚಿವರು, ಕರ್ನಾಟಕ ಲಾನ್ ಟೆನಿಸ್ ಅಸೋಸಿಯೇಷನ್ ಸಂಸ್ಥೆಯು ಕಲಬುರಗಿಯಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರ ತೆರೆಯಬೇಕು ಎಂದರು.

**ಅಧಿಕಾರಿಗಳ ಪಂದ್ಯಾವಳಿ:** ನಗರದಲ್ಲಿ ಒಂದು ವಾರ ನಡೆದ ಅಂತಾರಾಷ್ಟ್ರೀಯ ಟೆನಿಸ್ ಐಟಿಎಫ್ ಪಂದ್ಯಾವಳಿ ಕೇವಲ ಅಧಿಕಾರಿಗಳ ಟೂರ್ನಿ ಎಂಬಂತೆ ಕಂಡು ಬಂತು. ಈ ಮಾತು ಹಲವು ಕ್ರೀಡಾಭಿಮಾನಿಗಳಿಂದ ಇದೇ ಸಂದರ್ಭದಲ್ಲಿ ಕೇಳಿ ಬಂತು.

ಟೆನಿಸ್ ಪಂದ್ಯಾವಳಿ ಬಗ್ಗೆ ನಗರ ಸೇರಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಟೂರ್ನಿ ಬಗ್ಗೆಜಿಲ್ಲಾಡಳಿತಪ್ರಚಾರಮಾಡದೇಹಿಂದೆ ಬಿದ್ದಿತ್ತು. ಪಂದ್ಯಾವಳಿಆರಂಭದಿಂದಸೆಮಿ ಫೈನಲ್‌ವರೆಗೂ ಕೇವಲ ಅಧಿಕಾರಿಗಳು ಮಾತ್ರ ಪಂದ್ಯ ನೋಡುವಂತಾಗಿತ್ತು. ಇನ್ನೂ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯದಲ್ಲೂ ಅಧಿಕಾರಿಗಳ ದಂಡು ಮುಂದಿದ್ದರೆ, ಅಲ್ಲಲ್ಲಿ ಕೆಲವು ಟೆನಿಸ್ ಅಭಿಮಾನಿಗಳು ಕಾಣಿಕೊಂಡರು.

# ಕಲಬುರಗಿಯಲ್ಲಿ ಟೆನಿಸ್ ತರಬೇತಿ ಕೇಂದ್ರ ಸ್ಥಾಪಿಸಿ

**ಕಲಬುರಗಿ:** ರಾಜ್ಯದಲ್ಲಿ ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಟೆನಿಸ್ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡಲು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಆಸೋಸಿಯೇಷನ್ ಸಂಸ್ಥೆಯು ಕಲಬುರಗಿ ಕೇಂದ್ರವಾಗಿಟ್ಟುಕೊಂಡು ಆಸಕ್ತ ಕ್ರೀಡಾಪಟುಗಳಿಗೆ ನಿರಂತರ ತರಬೇತಿ ನೀಡಲು ಪ್ರಾದೇಶಿಕ ತರಬೇತಿ ಕೇಂದ್ರ ತೆರೆಯಬೇಕು ಎಂದುಗ್ರಾಮೀಣಾಭಿವೃದ್ಧಿಮತ್ತುಪಂಚಾಯತ್ ರಾಜ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಚಂದ್ರಶೇಖರ ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ನಡೆದ ಕಲಬುರಗಿ ಓಪನ್ ಮೆನ್ಸ್ ಸಿಂಗಲ್ಸ್ ಫೈನಲ್ ಪಂದ್ಯದಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಸರ್ಕಾರ ಇದಕ್ಕಾಗಿ ಎಲ್ಲ ಮೂಲ ಸೌಕರ್ಯ ಕಲ್ಪಿಸಲು ಬದ್ಧವಾಗಿದೆ. ತರಬೇತಿ ಇಲ್ಲದಿದ್ದಲ್ಲಿ ಸ್ಥಳೀಯ ಪ್ರತಿಭೆಗಳು ಹೊರಬರಲು ಅಸಾಧ್ಯ. ರಾಜ್ಯ ಸರ್ಕಾರ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕಲಬುರಗಿಯಲ್ಲಿ ಐಟಿಎಫ್ ಟೂರ್ನಿ ಆಯೋಜನೆಯೇ ಇದಕ್ಕೆ ಸಾಕ್ಷಿ. ಕೆಎಸ್ ಎಲ್‌ಟಿಗೆ ಇದು ಒಂದು ಟೂರ್ನಿಯಾದರೆ, ಕಲಬುರಗಿಗೆ 9 ಜನ ವಿದೇಶಿ ಆಟಗಾರರು ಭಾಗವಹಿಸಿ ಅಂತಾರಾಷ್ಟ್ರೀಯ ಪಂದ್ಯಾವಳಿ ಇದಾಗಿದೆ. ಸುಮಾರು ಒಂದು ವಾರಗಳ ಟೆನಿಸ್ ಹಬ್ಬವನ್ನು ಇಲ್ಲಿನಜನರುಕಣ್ತುಂಬಿಕೊಂಡಿದ್ದಾರೆ. ಇಂತಹ ಅಂತಾರಾಷ್ಟ್ರೀಯ, ರಾಷ್ಟ್ರೀಯ ಟೂರ್ನಿ ವರ್ಷದಲ್ಲಿ ಎರಡ್ಮೂರು ಬಾರಿ ಇಲ್ಲಿ ಆಯೋಜಿಸಿದ್ದಲ್ಲಿ ಟೆನಿಸ್ ಬೆಳವಣಿಗೆಗೆ ಸಹಕಾರಿಯಾಗಲಿದೆ. ಸ್ಥಳೀಯ ಕ್ರೀಡಾಪಟುಗಳು, ಬಾಲ್ ಬಾಯ್ಸ್‌ಗಳಿಗೆ ವಿದೇಶಿ ಆಟಗಾರರನ್ನು ಸಮೀಪದಿಂದ ನೋಡುವ ಭಾಗ್ಯ ಸಿಕ್ಕಿದೆ ಎಂದು ಕೆಎಸ್‌ಎಲ್ ಟಿಎ ಸಂಸ್ಥೆ ಉಪಾಧ್ಯಕ್ಷರಾದ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಟೂರ್ನಿ ಯಶಸ್ವಿಯಾಗಿ ಆಯೋಜಿಸಿದ ಡಿಸಿ ಬಿ. ಫೌಜಿಯಾ ತರನ್ನುಮ್ ನೇತೃತ್ವದ ಜಿಲ್ಲಾಡಳಿತ ತಂಡಕ್ಕೆ ಸಚಿವರು ಅಭಿನಂದನೆ ಸಲ್ಲಿಸಿದರು. ಅಲ್ಲದೇ ಟೂರ್ನಿ ಆಯೋಜನೆಗೆ ಪ್ರಾಯೋಜಕತ್ವ ನೀಡಿದ ಉದ್ಯಮಿಗಳಿಗೆ, ಬಾಲ್ ಬಾಯ್ಸ್, ಅಂಪೈರ್, ಕ್ರೀಡಾಪಟುಗಳು, ಮಾಧ್ಯಮದವರು,. ಫೈನಲ್ ಪಂದ್ಯದಲ್ಲಿ ಕಿರೀಟಕ್ಕೆ ಶ್ರಮಿಸಿದ ರಾಮಕುಮಾರ ಮತ್ತು ಡೇವಿಡ್ ಪಿಚ್ಲರ್ ಪಂದ್ಯ ವೀಕ್ಷಣೆಗೆ ಬಂದ ಪ್ರೇಕ್ಷಕರಿಗೆ ಧನ್ಯವಾದ ತಿಳಿಸಿದರು.

**33 ಕೋಟಿ ವೆಚ್ಚದಲ್ಲಿ ಚಂಪಾ ಕ್ರೀಡಾಂಗಣ ಮೇಲ್ದರ್ಜೆಗೆ:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಟೆನಿಸ್ ಕ್ರೀಡೆ ಸೇರಿದಂತೆ ಎಲ್ಲ ಕ್ರೀಡೆಗಳಿಗೆ ಉತ್ತೇಜನ ನೀಡಲು ಕಲಬುರಗಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣಲ್ಲಿ ಟೆನಿಸ್ ಕ್ರೀಡಾಂಗಣವನ್ನು 33 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೇಲ್ದರ್ಜೆಗೇರಿಸಲು ನೀಲಿ ನಕ್ಷೆ ಸಿದ್ಧಪಡಿಸಲಾಗಿದೆ. ಇನ್ನೆರಡು ತಿಂಗಳಲ್ಲಿ ಇದಕ್ಕೆ 20 ಕೋಟಿ ರೂ. ಅನುದಾನ ಸಹ ಬಿಡುಗಡೆ ಮಾಡಲಾಗುವುದು. ಚಂಪಾ ಕ್ರೀಡಾಂಗಣದಲ್ಲಿ 18 ಕೋಟಿ ರೂ. ವೆಚ್ಚದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಇಂಡೋರ್ ಸ್ಟೇಡಿಯಂ ನಿರ್ಮಿಸಲು ಜಾಗ ಸಹ ಗುರುತಿಸಲಾಗಿದೆ ಎಂದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಆರ್. ಚೇತನಕುಮಾರ, ಎಸ್‌ಪಿ ಅಡ್ಡೂರು ಶ್ರೀನಿವಾಸಲು, ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಸೋಸಿಯೇಷನ್ ಗೌರವ ಜಂಟಿ ಕಾರ್ಯದರ್ಶಿ ಸುನೀಲ ಯಜಮಾನಾ, ಐಟಿಎಫ್ ಸೂಪರ್‌ವೈಸರ್ ಧಾರಕಾ ಎಲ್ಲವಾಲಾ, ಟೂರ್ನಿ ನಿರ್ದೇಶಕ ಪೀಟರ್ ವಿಜಯಕುಮಾರ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ಮಮತಾ ಕುಮಾರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಗಾಯತ್ರಿ, ಹಾಗೂ ಜಿಲ್ಲಾ ಮಟ್ಟದ ಅನೇಕ ಅಧಿಕಾರಿಗಳು ಇದ್ದರು.




**ಕಲಬುರಗಿ: ಚಾಂಪಿಯನ್ ಆಗಿ ಹೊರಹೊಮ್ಮಿದ ರಾಮಕುಮಾರ ರಾಮನಾಥನ್ ಹಾಗೂ ಇನ್ನುಳಿದ ಸ್ಪರ್ಧಾ ವಿಜೇತರಿಗೆ ಟ್ರೋಫಿ ವಿತರಿಸಲಾಯಿತು.**

## ಸ್ಥಳ ಬದಲಿಸಿದ ವಿಐಪಿ ಗ್ಯಾಲರಿ!

**ಟೂರ್ನಿ ಆರಂಭದಿಂದ ವಿಐಪಿಗಳಿಗಾಗಿ ಕೋರ್ಟ್ 1ರ ಎಡ ಭಾಗದಲ್ಲಿ ವಿಐಪಿ ಗ್ಯಾಲರಿ ಮಾಡಲಾಗಿತ್ತು. ಆದರೆ ಫೈನಲ್ ಪಂದ್ಯಕ್ಕೆ ದಿಢೀರ್ ಎಂದು ಗ್ಯಾಲರಿ ಸ್ಥಳ ಬದಲು ಮಾಡಿದ್ದು ಕಂಡು ಬಂತು. ಸೆಮಿಫೈನಲ್ ಪಂದ್ಯದ ವೇಳೆ ಬಿಸಿಲು ಹಾಗೂ ವೀಕ್ಷಣೆಗೆ ಸ್ಥಳ ಸರಿಯಿಲ್ಲ ಎಂದು ಕೆಲ ಉನ್ನತ ಅಧಿಕಾರಿಗಳು ಹೇಳಿದ್ದಾರೆ ಎಂಬ ಕಾರಣದಿಂದ ಗ್ಯಾಲರಿ ದಿಢೀರನೇ ಕೋರ್ಟ್ 1ರ ಎದುರಿಗೆ ಸ್ಥಳಾಂತರ ಮಾಡಿದ್ದರು. ಟೂರ್ನಿಗೂ ಮುನ್ನ ಲಕ್ಷಾಂತರ ರೂ. ಖರ್ಚು ಮಾಡಿ ಸಾರ್ವಜನಿಕರಿಗಾಗಿ ಕುರ್ಚಿ ವ್ಯವಸ್ಥೆಮಾಡಲಾಗಿತ್ತು. ಆದರೆ ವಿಐಪಿ ಲಾಂಜ್ ನಿರ್ಮಾಣಕ್ಕೆ ಎಲ್ಲ ಕುರ್ಚಿಗಳನ್ನು ರಾತ್ರೋ ರಾತ್ರಿ ತೆಗೆಯಲಾಯಿತು. ಇದರಿಂದ ಹಲವರು ನಿಂತುಕೊಂಡು ಪಂದ್ಯ ನೋಡುವ ಸ್ಥಿತಿ ನಿರ್ಮಾಣವಾಗಿತ್ತು.**

EDITORIAL NEWS

# HAUGHTY CONGRESS SQUANDERS INITIATIVE TO BJP AHEAD OF 2024

IF the Congress picked up momentum months before the 2019 Lok Sabha elections by trouncing the BJP in the big Hindi heartland states of Madhya Pradesh, Rajasthan and Chhattisgarh, it got ejected from them this time around, dampening the party's say in the opposition INDIA bloc. In hindsight, had the Grand Old Party shed arrogance and given a few seats to allies like the Samajwadi Party, it would have been a force multiplier and possibly altered the dynamic in states like Madhya Pradesh. Kamal Nath was so overconfident that he did not think extensive campaigning by Priyanka and Rahul Gandhi was necessary. He is now licking his wounds.

Chhattisgarh was more of a surprise as the Congress was more than confident of retaining it. Loads of welfare schemes, Chief Minister Bhupesh Baghel's soft Hindutva and the lack of credible leadership in the state BJP had, in his mind, made the election an open-and-shut case. Yet, anti-incumbency is a beast the Congress has not learnt to manage. Fresh corruption allegations by central law enforcement agencies against Baghel close to the polling date—on the Mahadev app scam—added to his discomfort. BJP's Raman Singh, pulled out of political wilderness at the last moment to lead the charge in Raipur, emerged victorious. In Rajasthan, no amount of papering over could hide the ugly factional feud between Chief Minister Ashok Gehlot and Sachin Pilot. Sops such as free power, subsidised LPG refills and health insurance were not enticing enough for a repeat mandate. Goes to show the politics of giveaways alone cannot win elections—even in Telangana. Rahul Gandhi's Bharat Jodo Yatra spent ample time in all three states but to no avail.

People instead reposed trust in Narendra Modi, who sought votes in his own name despite these being state elections. Matching the Congress guarantee for guarantee helped, as it knocked out the GOP's USP. Modi now holds the initiative in the run-up to the 2024 Lok Sabha polls. The Telangana acquisition of the Congress was a phenomenal feat, but was overshadowed by the drubbing in the other three states. Telangana was gift-wrapped by pollster Sunil Kanugolu, who had worked in Karnataka earlier. What the Congress probably needs is humility and professional poll managers at the national level to function without interference to get its mojo back and stay afloat in the general elections.

# ಕರ್ನಾಟಕದ ಗ್ಯಾರಂಟಿ ತೆಲಂಗಾಣದಲ್ಲಿ ಫಲಕಾರಿ

ಕರ್ನಾಟಕದಲ್ಲಿ ಕಾಂಗ್ರೆಸ್ 5 ಉಚಿತ ಯೋಜನೆಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದಂತೆ ತೆಲಂಗಾಣದಲ್ಲೂ ಅಧಿಕಾರ ಪಡೆಯಲು ಸಾಧ್ಯವಾಗಿದೆ. ತೆಲಂಗಾಣದ ಮತದಾರರು ಕರ್ನಾಟಕದವರನ್ನು ನೋಡಿ ಅದನ್ನೇ ಮಾದರಿಯಾಗಿ ಸ್ವೀಕರಿಸಿದ್ದಾರೆ. ಮೋದಿ ಕಡೆಗಣಿಸಿದ್ದು ಬೆಲೆಏರಿಕೆ ಮತ್ತು ನಿರುದ್ಯೋಗ. ಈಗ ಕಾಂಗ್ರೆಸ್ ಅದಕ್ಕೆ ಮಹತ್ವ ನೀಡಲಿದೆ. ಜಾತಿ ಸಮೀಕ್ಷೆಗೆ ಎಲ್ಲ ಕಡೆ ಬೇಡಿಕೆ ಬರುತ್ತಿದೆ. ಮೋದಿ ಅದನ್ನು ಒಪ್ಪುತ್ತಿಲ್ಲ. ಬಿಜೆಪಿಯ ನಿಜವಾದ ಬಣ್ಣ ಬಯಲಾಗುತ್ತಿದೆ. ಅಕ್ರಮಗಳು ಬಹಿರಂಗಗೊಳ್ಳುತ್ತಿದೆ. 5 ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶವನ್ನು ಮುಂದಿನ ಲೋಕಸಭೆ ಚುನಾವಣೆಗೆ ದಿಕ್ಸೂಚಿ ಎಂದು ಪರಿಗಣಿಸಬೇಕಿಲ್ಲ 2018 ಮತ್ತು 2019 ರ ಚುನಾವಣೆಗಳು ಇನ್ನೂ ನಮ್ಮ ನೆನಪಿನಲ್ಲಿ ಹಚ್ಚಹಸಿರಾಗಿದೆ.

ಛತ್ತೀಸಗಢದಲ್ಲಿ ಬಿಜೆಪಿ ಹಿಂದೆ ಆಡಳಿತ ನಡೆಸಿತ್ತು. ಆಗ ಬಡತನ ಅಧಿಕಗೊಂಡಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅದು ಭತ್ತದ ಕಣಜವಾಯಿತು. ತಲಾವಾರು ಆದಾಯ 88793 ರೂ ಇದ್ದದ್ದು 133897 ರೂ. ಆಯಿತು. 40 ಲಕ್ಷ ಜನ ಬಡತನದಿಂದ ಹೊರಬಂದರು. ಈಗ ಮತ್ತೆ ಚುನಾವಣೆಯಲ್ಲಿ ಮೋದಿಯ ಮುಖ ತೋರಿಸಿ ಬಿಜೆಪಿ ಮತ ಪಡೆಯುತ್ತಿದೆ. ಮಧ್ಯಪ್ರದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಹಣಾಹಣಿ ಹೋರಾಟ ನಡೆಸಿದೆ.



## ಅರ್ಥ–ವ್ಯಾಪ್ತಿ

**ಪಿ.ಚಿದಂಬರಂ**
**ಕೇಂದ್ರದ ಮಾಜಿ ಸಚಿವರು**

ರಾಜಸ್ಥಾನದೇ ಬೇರೆ ಕತೆ. ಅಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ಸರ್ಕಾರ ಬದಲಾಗುತ್ತಿದೆ. ಜನ ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸುತ್ತಾರೆ. ಅವರ ಅಗ್ನಿಪರೀಕ್ಷೆ ಎಲ್ಲ ಸರ್ಕಾರಗಳೂ ಒಳಗಾಗಲೇಬೇಕು. ಪಕ್ಷೇತರರದೇ ಪ್ರಾಬಲ್ಯ. ಇವರು ಬಹುತೇಕ ಪ್ರಮುಖ ಪಕ್ಷಗಳಲ್ಲಿ ಟಿಕೆಟ್‌ಗೆ ಪ್ರಯತ್ನಿಸಿ ಸಿಗದೇ ಪಕ್ಷೇತರರಾಗಿ ಸ್ಪರ್ಧಿಸಿದವರು. ಈಗ ಫಲಿತಾಂಶ ಬಂದಿದೆ. ಇನ್ನೂ ನಡೆಯುವ ನಾಟಕಗಳೇ ಬೇರೆ.

ತೆಲಂಗಾಣ ಫಲಿತಾಂಶವೇ ಬೇರೆ. ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಅವರನ್ನು ಜನ ಫಾರಂ ಹೌಸ್ ಸಿಎಂ ಎಂದು ಕರೆಯುತ್ತಾರೆ. ಇಡೀ ಕುಟುಂಬವೇ ಸರ್ಕಾರವನ್ನು ನಡೆಸುತ್ತದೆ. ಅದೇ ಈಗ ದೌರ್ಬಲ್ಯವಾಗಿದೆ.

ಕಾಂಗ್ರೆಸ್ ಪಕ್ಷ ರೇವಂತ್ ರೆಡ್ಡಿ ನೇತೃತ್ವದಲ್ಲಿ ತಲೆಎತ್ತಿದೆ. ಕಾಂಗ್ರೆಸ್‌ಗೆ ಗ್ರಾಮೀಣ ಯುವಕರ ಬೆಂಬಲ ಶ್ರೀರಕ್ಷೆಯಾಗಿದೆ. ಎಐಎಂಐಎಂ ಮತ್ತು ಬಿಜೆಪಿ ಅಲ್ಪಸ್ವಲ್ಪ ಸ್ಥಾನಗಳನ್ನು ಗಳಿಸಬಹುದು. ಕರ್ನಾಟಕದ ಪ್ರಭಾವ ಎದ್ದು ಕಂಡು ಬರುತ್ತಿದೆ. ಕರ್ನಾಟಕದ ನಾಯಕರು ತೆಲಂಗಾಣ ಶಾಸಕರ ರಕ್ಷಣೆಗೆ ಕಂಕಣಬದ್ಧರಾಗಿದ್ದಾರೆ. ಹೀಗಾಗಿ ತೆಲಂಗಾಣ ಹೊಸ ಬದಲಾವಣೆ ಕಾಣುವ ಹಂತದಲ್ಲಿದೆ.

ಮಿಜೋರಾಂನಲ್ಲಿ ರಾಜಕೀಯವೇ ಬೇರೆ. ಎರಡೂ ಸ್ಥಳೀಯ ಪಕ್ಷಗಳು. ಕುಕಿ ಮತ್ತು ಜೋಮೋಸ್ ನಡುವೆ ಹೋರಾಟ. ಕುಕಿಗಳ ವಲಸೆ ಈಗ ಬಹು ದೊಡ್ಡ ಸಮಸ್ಯೆ. ಇದನ್ನು ಮನಗಂಡ ಮೋದಿ ಅಲ್ಲಿಗೆ ಭೇಟಿಕೊಟ್ಟಿಲ್ಲ. ಮಣಿಪುರಕ್ಕಂತೂ ಮೇ ತಿಂಗಳಿನಿಂದ ಕಾಲಿಟ್ಟಿಲ್ಲ.

ಇಲ್ಲಿ ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಪಕ್ಷವನ್ನು ಬೆಂಬಲಿಸುತ್ತದೆ. ಅದರಿಂದ ರಾಷ್ಟೀಯ ಮಟ್ಟದಲ್ಲಿ ಮಿಜೋರಾಂ ಪಾತ್ರ ಕಡಿಮೆ. 5 ರಾಜ್ಯಗಳ ಚುನಾವಣೆ ಫಲಿತಾಂಶ 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸವಾಲು ಹಾಕುವವರು ಯಾರು ಎಂಬುದನ್ನು ಜನ ತೀರ್ಮಾನಿಸಬೇಕಿದೆ.

ರಾಜ್ಯ ವಿಧಾನಸಭೆ ಚುನಾವಣೆಗೂ ಲೋಕಸಭೆ ಚುನಾವಣೆಗೂ ಬಹಳ ಅಂತರ ಇದೆ. ಜನ ರಾಷ್ಟ್ರೀಯ ಸಮಸ್ಯೆ ಬಂದಾಗ ನೋಡುವ ರೀತಿಯೇ ಬೇರೆ. ರಾಜ್ಯದ ಪ್ರಶ್ನೆ ಬಂದಾಗ ನೋಡುವ ದೃಷ್ಟಿಕೋನವೇ ಬೇರೆ.

ಇಂದಿನಿಂದ ಲೋಕಸಭೆ ಚುನಾವಣೆಯ ಬಗ್ಗೆ ಮುಕ್ತ ಆರಂಭಗೊಳ್ಳುತ್ತದೆ. 5 ರಾಜ್ಯಗಳ ಚುನಾವಣೆ ಫಲಿತಾಂಶ ಅದಕ್ಕೆ ನಾಂದಿ ಹಾಡಲಿದೆ. ಕೇಂದ್ರ ಸರ್ಕಾರ ಇದುವರೆಗೆ ಮಾಡಿರುವ ಸಾಧನೆ ಏನು? ಮುಂದಿನ ದಿನಗಳು ಹೇಗಿರುತ್ತದೆ ಎಂಬುದನ್ನು ಮತದಾರರು ಕೂಲಂಕಷವಾಗಿ ಪರಿಶೀಲಿಸುವರು.■

ಉದಯವಾಣಿ
ಸೋಮವಾರ, ಡಿಸೆಂಬರ್ 4, 2023

## ಸಂಪಾದಕೀಯ

# ನಾಲ್ಕು ರಾಜ್ಯಗಳ ಫಲಿತಾಂಶ ಆಡಳಿತದಲ್ಲಿದ್ದ ಪಕ್ಷಗಳಿಗೆ ಪಾಠ



ಪಂಚರಾಜ್ಯಗಳಲ್ಲಿ ಮಿಜೋರಾಂ ಹೊರತುಪಡಿಸಿ, ಉಳಿದ ನಾಲ್ಕು ರಾಜ್ಯಗಳ ಫಲಿತಾಂಶ ಹೊರಬಿದ್ದಿದ್ದು, ಬಿಜೆಪಿ ಮೂರರಲ್ಲಿ, ಕಾಂಗ್ರೆಸ್ ಒಂದರಲ್ಲಿ ಗೆಲುವು ಸಾಧಿಸಿವೆ. ಮಧ್ಯಪ್ರದೇಶ ಹೊರತುಪಡಿಸಿ, ಉಳಿದ ರಾಜ್ಯಗಳಲ್ಲಿ ಆಡಳಿತ ಪಕ್ಷಗಳಿಗೆ ಮತದಾರ ತಕ್ಕ ಪಾಠವನ್ನೇ ಕಲಿಸಿದ್ದಾನೆ. ಅಂದರೆ, ಮೂರು ರಾಜ್ಯಗಳಲ್ಲಿಯೂ ಆಡಳಿತದಲ್ಲಿದ್ದ ಪಕ್ಷಗಳನ್ನು ಮತದಾರ ಸಾರಾಸಗಟಾಗಿ ತಿರಸ್ಕಾರ ಮಾಡಿದ್ದಾನೆ.

ರಾಜಸ್ಥಾನದಲ್ಲಿ ಅಶೋಕ್ ಗೆಹ್ಲೋಟ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿತ್ತು. ಆರಂಭದಿಂದಲೂ ಕಂಡು ಬಂದ ಆಂತರಿಕ ಕಿತ್ತಾಟದಿಂದ ಎಲ್ಲೋ ಒಂದು ಕಡೆ ಮತದಾರ ಬೇಸರ ವ್ಯಕ್ತಪಡಿಸಿದ್ದಾನೆ. ಇಲ್ಲಿ ಅಶೋಕ್ ಗೆಹ್ಲೋಟ್ ಮತ್ತು ಸಚಿನ್ ಪೈಲಟ್ ಅವರ ನಡುವೆ ಇಲ್ಲಿ ಆಂತರಿಕ ಸಂಘರ್ಷ ನಡೆದೇ ಇತ್ತು. ಆದರೆ, ಇಲ್ಲಿ ತನ್ನ ಆಂತರಿಕ ಕಿತ್ತಾಟವನ್ನು ಹೋಗಲಾಡಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನಿಸಲೇ ಇಲ್ಲ, ಇದು ಆ ಪಕ್ಷಕ್ಕೆ ಬಹುವಾಗಿ ಕಾಡಿದೆ. ಇನ್ನು ಛತ್ತೀಸ್‌ಗಡದಲ್ಲಿ ಚುನಾವಣೆಗೂ ಮುನ್ನ ಮರಳಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಬಗ್ಗೆ ಮಾತುಗಳಿದ್ದವು. ಇಲ್ಲಿ ಮುಖ್ಯಮಂತ್ರಿಯಾಗಿದ್ದ ಭೂಪೇಶ್ ಬಘೇಲ್, ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ಇವರ ಐದು ವರ್ಷದ ಆಡಳಿತದ ಬಗ್ಗೆ ಜನರಲ್ಲಿಯೂ ಉತ್ತಮ ಅಭಿಪ್ರಾಯಗಳಿವೆ ಎಂದೇ ಹೇಳಲಾಗುತ್ತಿತ್ತು. ರಾಜ್ಯದಲ್ಲಿ ನೀಡಿದ್ದ ಯೋಜನೆಗಳ ಬಗ್ಗೆ ಸದಭಿಪ್ರಾಯಗಳಿದ್ದವು. ಆದರೆ, ಪ್ರಜಾಪ್ರಭುತ್ವದಲ್ಲಿ ಚುನಾವಣೆ ಎಂದರೆ ಅದೊಂದು ಜಿದ್ದಾಜಿದ್ದಿನ ಸಮರ. ಇಲ್ಲಿ ಹೋರಾಟ ನಡೆಸುತ್ತಲೇ ಇರಬೇಕು. ಒಂದು ವೇಳೆ ಕೊಂಚ ಮೈಮರೆತರೂ, ಸೋಲು ಗ್ಯಾರಂಟಿ ಎಂಬುದನ್ನು ಈ ರಾಜ್ಯದಲ್ಲಿ ನೋಡಬಹುದಾಗಿದೆ. ಇಲ್ಲಿನ ಕಾಂಗ್ರೆಸ್ ಸೋಲಿಗೆ ಅತಿಯಾದ ಆತ್ಮವಿಶ್ವಾಸವೂ ಕಾರಣ ಎಂಬ ವಿಶ್ಲೇಷಣೆಗಳೂ ಇವೆ. ಹೀಗಾಗಿ, ಆಡಳಿತದಲ್ಲಿರುವವರು ಮತದಾರರನ್ನು ಲಘುವಾಗಿ ಪರಿಗಣಿಸಬಾರದು ಎಂಬುದು ಇಲ್ಲಿ ಸಾಬೀತಾಗಿದೆ.

ತೆಲಂಗಾಣದಲ್ಲಿಯೂ ಮತದಾರ ಆಡಳಿತದಲ್ಲಿದ್ದ ಬಿಆರ್‌ಎಸ್ ಅನ್ನು ತಿರಸ್ಕರಿಸಿದ್ದಾನೆ. ಇದು ಕಳೆದ 10 ವರ್ಷದಿಂದ ಆಡಳಿತದಲ್ಲಿತ್ತು. ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್, ಜನರಿಂದ ದೂರ ಸರಿಯುತ್ತಿದ್ದಾರೆ ಎಂಬ ಭಾವನೆ ವ್ಯಕ್ತವಾಗಿತ್ತು. ತೋಟದ ಮನೆಯಿಂದ ಆಡಳಿತ ನಡೆಸುತ್ತಿದ್ದಾರೆ ಎಂಬ ಆರೋಪಗಳೂ ಕಾಂಗ್ರೆಸ್, ಬಿಜೆಪಿ ಕಡೆಯಿಂದ ಕೇಳಿಬರುತ್ತಿದ್ದವು. ಆದರೆ, ಈ ಯಾವ ಆರೋಪಗಳ ಬಗ್ಗೆ ಚಂದ್ರಶೇಖರ ರಾವ್ ಗಂಭೀರವಾಗಿ ಪರಿಗಣಿಸಲೇ ಇಲ್ಲ, ಇಲ್ಲಿಯೂ ಮತದಾರರು ತಮ್ಮನ್ನು ಕೈಬಿಡುವುದಿಲ್ಲ ಎಂದೇ ಆತ್ಮವಿಶ್ವಾಸದಲ್ಲಿದ್ದರು. ಇಲ್ಲಿ ಮತದಾರ ಸೋಲಿನ ಪಾಠ ಕಲಿಸಿದ್ದಾನೆ. ಮಧ್ಯಪ್ರದೇಶದಲ್ಲಿ ಮಾತ್ರ ಆಡಳಿತ ವಿರೋಧಿ ಅಲೆ ಮಧ್ಯೆಯೂ ಆಡಳಿತ ಪಕ್ಷ ವಾಪಸ್ ಅಧಿಕಾರಕ್ಕೇರಿದೆ. ಇಲ್ಲಿ ಪ್ರತಿಪಕ್ಷ ಜನರನ್ನು ತಲುಪುವಲ್ಲಿ ವಿಫಲವಾಗಿದೆ. ಆಡಳಿತದಲ್ಲಿದ್ದ ಪಕ್ಷ, ಚುನಾವಣೆಯನ್ನು ಹೆಚ್ಚು ವೃತ್ತಿಪರತೆಯಿಂದ ಎದುರಿಸಿ ಗೆಲುವು ಸಾಧಿಸಿದೆ. ಏನೇ ಆಗಲಿ, ಇಡೀ ಚುನಾವಣೆಯಲ್ಲಿ ಮತದಾರನೇ ರಾಜ. ಆತನಿಗೆ ತಿಳಿದಂತೆಯೇ ವರ್ತಿಸುತ್ತಾನೆ. ತನ್ನನ್ನು ಲಘುವಾಗಿ ಪರಿಗಣಿಸಬೇಡಿ ಎಂಬುದನ್ನು ಆತ ಪ್ರತಿ ಚುನಾವಣೆಯಲ್ಲೂ ತೋರಿಸುತ್ತಾನೆ. ಲಘುವಾಗಿ ಪರಿಗಣಿಸಿದರೆ ತಕ್ಕ ಪಾಠ ಕಲಿಸುತ್ತಾನೆ. ಇದಕ್ಕೆ ಈ ನಾಲ್ಕು ಚುನಾವಣೆಗಳ ಫಲಿತಾಂಶವೇ ಸಾಕ್ಷಿಯಾಗಿದೆ.

ಕನ್ನಡಪ್ರಭ
ಸಂಪಾದಕೀಯ

# ಪುನಃ ಮೋದಿ ಮ್ಯಾಜಿಕ್: ಕಾಂಗ್ರೆಸ್‌ಗೆ ಮತ್ತೆ ಹಿನ್ನಡೆ

ನಾಲ್ಕು ರಾಜ್ಯಗಳ ವಿಧಾನಸಭೆ ಚುನಾವಣೆಯ ಫಲಿತಾಂಶ ಈ ಬಾರಿ ಹಲವು ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿದೆ. ಮೂರು ರಾಜ್ಯಗಳಲ್ಲಿ ಗೆಲ್ಲುವ ಕಾಂಗ್ರೆಸ್‌ನ ಲೆಕ್ಕಾಚಾರ ಅತಿಯಾದ ಆತ್ಮವಿಶ್ವಾಸವೆಂದು ಸಾಬೀತಾಗಿದೆ. ಮೋದಿ ಅಲೆ ಕ್ಷೀಣಿಸುತ್ತಿದೆ ಎಂಬ ವ್ಯಾಖ್ಯಾನಗಳು ಸುಳ್ಳಾಗಿ ಮೂರು ರಾಜ್ಯಗಳಲ್ಲಿ ಮತ್ತೆ ಮೋದಿ ಅಲೆಯೇ ಬಿಜೆಪಿಯನ್ನು ದೊಡ್ಡ ಗೆಲುವಿನ ಸಿಂಹಾಸನದ ಮೇಲೆ ತಂದು ಕೂರಿಸಿದೆ. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ ಹಾಗೂ ತೆಲಂಗಾಣ ಈ ನಾಲ್ಕೂ ರಾಜ್ಯಗಳಲ್ಲಿ ಬಿಜೆಪಿಯು ಸಿಎಂ ಅಭ್ಯರ್ಥಿಯನ್ನು ಘೋಷಿಸಿರಲಿಲ್ಲ ಅಥವಾ ಬಿಂಬಿಸಿರಲೂ ಇಲ್ಲ. ಎಲ್ಲಾ ಕಡೆ ಮೋದಿಯೇ ಸಿಎಂ ಅಭ್ಯರ್ಥಿಯೆಂಬಂತೆ ಪ್ರಚಾರ ಮಾಡಿದ್ದರು. ಆ ಪೈಕಿ ಹಿಂದಿ ಹೃದಯದ ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಗಳಿಸಿರುವುದು ಮೋದಿ ಮ್ಯಾಜಿಕ್‌ಗೆ ಮತದಾರರು ಮನಸೋತಿರುವುದರ ದ್ಯೋತಕ. ಇದು ಬಿಜೆಪಿಗೆ ಕೆಲವೇ ತಿಂಗಳುಗಳಲ್ಲಿ ನಡೆಯುವ ಲೋಕಸಭೆ ಚುನಾವಣೆಗೆ ಬೂಸ್ಟರ್ ಡೋಸ್ ನೀಡಿದೆ. ಬಿಜೆಪಿ ಗೆದ್ದ ಮೂರು ರಾಜ್ಯಗಳಲ್ಲಿ 75-80 ಲೋಕಸಭಾ ಸೀಟುಗಳಿವೆ.


> ನಾಲ್ಕು ರಾಜ್ಯಗಳ ಫಲಿತಾಂಶದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳಿಗೆ ಪ್ರತ್ಯೇಕ ಪಾಠವನ್ನೇ ಮತದಾರರು ಕಲಿಸಿದ್ದಾರೆ.

ಬಿಜೆಪಿ ಗೆದ್ದ ರಾಜ್ಯಗಳಲ್ಲಿ ಹಾಗೂ ಕಾಂಗ್ರೆಸ್ ಸೋತ ರಾಜ್ಯಗಳಲ್ಲಿ ಎರಡೂ ಪಕ್ಷಗಳಿಗೆ ಮತದಾರರು ಪ್ರತ್ಯೇಕ ಪಾಠವನ್ನೇ ಕಲಿಸಿದ್ದಾರೆ. ಕರ್ನಾಟಕದಲ್ಲಿ ಮಾಡಿದ ತಪ್ಪುಗಳನ್ನು ಈ ಬಾರಿ ಸರಿಪಡಿಸಿಕೊಂಡು ಬಿಜೆಪಿ ಗೆದ್ದಿದೆ. ಸ್ಥಳೀಯ ನಾಯಕತ್ವವನ್ನು ಕಡೆಗಣಿಸುವುದು ದುಬಾರಿಯಾಗುತ್ತದೆ ಎಂಬುದೀಗ ಬಿಜೆಪಿಗೆ ಮನವರಿಕೆಯಾಗಿದೆ. ಅದೇ ರೀತಿ, ಉಚಿತ ಗ್ಯಾರಂಟಿಗಳನ್ನೇ ಟ್ರಂಪ್‌ಕಾರ್ಡ್ ಮಾಡಿಕೊಂಡರೆ ಮತದಾರರನ್ನು ಸೆಳೆಯಲು ಸಾಧ್ಯವಿಲ್ಲ ಎಂಬುದು ಕಾಂಗ್ರೆಸ್‌ಗೆ ಮನವರಿಕೆಯಾಗಿದೆ. ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳು ಕೈಹಿಡಿದ ಕಾರಣ ನಾಲ್ಕೂ ರಾಜ್ಯಗಳಲ್ಲಿ ನಂ.1 ಚುನಾವಣಾ ಅಸ್ತ್ರವನ್ನಾಗಿ ಕಾಂಗ್ರೆಸ್ ಪಕ್ಷವು ಉಚಿತ ಭರವಸೆಗಳನ್ನೇ ನೆಚ್ಚಿಕೊಂಡಿತ್ತು. ತೆಲಂಗಾಣದಲ್ಲಿ ಗೆದ್ದಿರುವುದು ಕೇವಲ ಉಚಿತ ಭರವಸೆಗಳಲ್ಲ, ಕೆಸಿಆರ್ ಆಡಳಿತದ ವಿರೋಧಿ ಅಲೆ ಮತ್ತು ಬಿಜೆಪಿಯ ನಿರಾಸಕ್ತಿ ಕೂಡ.

ವಿಶೇಷವೆಂದರೆ ನಾಲ್ಕೂ ರಾಜ್ಯಗಳಲ್ಲಿ ಸ್ಪಷ್ಟ ಬಹುಮತವನ್ನು ಒಂದು ಪಕ್ಷಕ್ಕೆ ನೀಡುವ ಮೂಲಕ ಮತದಾರರು ಸುಸ್ಥಿರ ಆಡಳಿತಕ್ಕೆ ಜನಾದೇಶ ನೀಡಿದ್ದಾರೆ. ರಾಜಸ್ಥಾನದ ಅಸ್ಥಿರತೆ, ಮಧ್ಯಪ್ರದೇಶದ ಪಕ್ಷಾಂತರಗಳು ಹಾಗೂ ತೆಲಂಗಾಣದಲ್ಲಿ ನಡೆದ 'ಆಪರೇಷನ್'ನಿಂದ ಜನರು ಎಚ್ಚೆತ್ತಿದ್ದಾರೆ. ಈ ಬಾರಿ ಎಲ್ಲೂ ಕುದುರೆ ವ್ಯಾಪಾರಕ್ಕೆ ಅವಕಾಶವಿಲ್ಲ. ಹೀಗಾಗಿ ಪ್ರಜಾಪ್ರಭುತ್ವದಲ್ಲಿ ಅಂತಿಮ ಗೆಲುವು ಮತದಾರರದೇ ಎಂಬುದು ಸಾಬೀತಾಗಿದೆ. ಅದರ ಸಂದೇಶವನ್ನು ರಾಜಕೀಯ ಪಕ್ಷಗಳು ಅರ್ಥಮಾಡಿಕೊಳ್ಳಬೇಕಷ್ಟೆ. ಗೆದ್ದೇ ಗೆಲ್ಲುವ ರಾಜ್ಯದಲ್ಲಿ ಉಂಟಾದ ಸೋಲಿನ ಬಗ್ಗೆ ಕಾಂಗ್ರೆಸ್ ಪಕ್ಷ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಲೋಕಸಭೆ ಚುನಾವಣೆಗಿರುವ ಸಂದೇಶವನ್ನು 'ಇಂಡಿಯಾ' ಕೂಟವೂ ಅರಿತುಕೊಳ್ಳಬೇಕಿದೆ.

# ಬಿಜೆಪಿಗೆ ಭರ್ಜರಿ ಗೆಲುವಿನ ಗರಿ ಕಾಂಗ್ರೆಸ್ ತೆಲಂಗಾಣಕ್ಕೆ ಸೀಮಿತ

**ಲೋಕಸಭೆಗೆ** ಚುನಾವಣೆ ನಡೆಯುವ ಕೆಲವೇ ತಿಂಗಳ ಮೊದಲು ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆದಿದೆ. ಈ ಪೈಕಿ ನಾಲ್ಕು ಪ್ರಮುಖ ರಾಜ್ಯಗಳ ಫಲಿತಾಂಶವು ರಾಷ್ಟ್ರ ರಾಜಕಾರಣವು ಯಾವ ದಿಕ್ಕಿನತ್ತ ಸಾಗಲಿದೆ ಎಂಬುದರ ಸುಳಿವು ನೀಡಿದೆ. ಹಿಂದಿ ಭಾಷಿಕ ಪ್ರದೇಶದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಬಿಜೆಪಿ ಭಾರಿ ಅಂತರದಿಂದ ಗೆಲುವು ದಾಖಲಿಸಿದೆ. ಟಿಕೆಟ್ ಹಂಚಿಕೆ, ಚುನಾವಣಾ ಪ್ರಚಾರ ನಿರ್ವಹಣೆ ಸೇರಿ ಚುನಾವಣೆಯ ಎಲ್ಲ ವಿಚಾರಗಳಲ್ಲಿಯೂ ತನಗೆ ಸರಿಸಾಟಿ ಇಲ್ಲ ಎಂಬುದನ್ನು ಬಿಜೆಪಿ ಸಾಬೀತು ಮಾಡಿದೆ. ರಾಜ್ಯ ಮಟ್ಟದಲ್ಲಿ ಭಾರಿ ಜನಪ್ರಿಯತೆ ಹೊಂದಿರುವ ನಾಯಕರಿದ್ದಾಗಲೂ ಪಕ್ಷವು ಅವರನ್ನು ಅತಿಯಾಗಿ ನೆಚ್ಚಿಕೊಳ್ಳಲಿಲ್ಲ. ಬಿಜೆಪಿ ವರಿಷ್ಠರು ಎಲ್ಲವನ್ನೂ ತಮ್ಮ ಮುಷ್ಟಿಯಲ್ಲಿಯೇ ಇರಿಸಿಕೊಂಡು ಚುನಾವಣೆಯನ್ನು ನಿರ್ವಹಿಸಿ ಗೆಲುವು ದೊರಕಿಸಿಕೊಟ್ಟಿದ್ದಾರೆ. ನಾಲ್ಕು ಅವಧಿಗೆ ಮುಖ್ಯಮಂತ್ರಿಯಾಗಿದ್ದ ಶಿವರಾಜ್ ಸಿಂಗ್ ಚೌಹಾಣ್, ರಾಜಸ್ಥಾನದಲ್ಲಿ ದೊಡ್ಡ ವರ್ಚಸ್ಸು ಹೊಂದಿರುವ ವಸುಂಧರಾ ರಾಜೇ, ಛತ್ತೀಸಗಢದ ರಮಣ್ ಸಿಂಗ್ ಅವರನ್ನು ಪಕ್ಷವು ಪ್ರಚಾರದ ಮುಂಚೂಣಿಗೆ ತರಲಿಲ್ಲ. ಕೇಂದ್ರದ ಸಚಿವರು ಮತ್ತು ಸಂಸದರನ್ನು ಕಣಕ್ಕೆ ಇಳಿಸುವ ಮೂಲಕ ಗೆಲ್ಲುವ ಯಾವ ಅವಕಾಶವನ್ನೂ ಬಿಟ್ಟುಕೊಡಬಾರದು ಎಂಬ ಕಾರ್ಯತಂತ್ರವನ್ನು ಗಟ್ಟಿಯಾಗಿ ಹಿಡಿದುಕೊಂಡಿತು. ಮಧ್ಯಪ್ರದೇಶದಲ್ಲಿ ಹಲವು ಹೊಸ ಮುಖಗಳಿಗೆ ಟಿಕೆಟ್ ನೀಡುವ ಮೂಲಕ ಆಡಳಿತ ವಿರೋಧಿ ಅಲೆ ಬಾಧಿಸದಂತೆ ನೋಡಿಕೊಂಡಿತು. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಜೋಡಿಯ ಚುನಾವಣೆ ಗೆಲ್ಲಿಸಿಕೊಡುವ ಸಾಮರ್ಥ್ಯಕ್ಕೆ ಕಿಂಚಿತ್ತೂ ಚ್ಯುತಿ ಬಂದಿಲ್ಲ ಎಂಬುದನ್ನು ಫಲಿತಾಂಶವು ಸ್ಪಷ್ಟಪಡಿಸಿದೆ. ಮತಗಟ್ಟೆ ಮಟ್ಟದವರೆಗಿನ ವ್ಯವಸ್ಥಿತವಾದ ಸಂಘಟನೆಯು ಬಿಜೆಪಿಯ ದೊಡ್ಡ ಶಕ್ತಿ ಎಂಬುದು ಮತ್ತೆ ಮತ್ತೆ ನಿಚ್ಚಳವಾಗುತ್ತಿದೆ.



**ರಾಜಕೀಯ ಪಕ್ಷಗಳು ಮತ್ತು ಅವುಗಳ ಆಳ್ವಿಕೆಯನ್ನು ಮತದಾರ ನಿರಂತರವಾಗಿ ವಿಮರ್ಶೆಗೆ ಒಳಪಡಿಸುತ್ತಲೇ ಇದ್ದಾನೆ ಎಂಬುದನ್ನು ಈ ಚುನಾವಣೆಗಳ ಫಲಿತಾಂಶ ದೃಢಪಡಿಸಿದೆ**

ಈ ಫಲಿತಾಂಶದಿಂದ ಬಿಜೆಪಿಯೇತರ ಪಕ್ಷಗಳಿಗೆ ಹಲವು ಪಾಠಗಳನ್ನು ಮತದಾರ ಕಲಿಸಿದ್ದಾನೆ. ಕಾಂಗ್ರೆಸ್ ಪಕ್ಷವು ಹೀನಾಯವಾಗಿ ಸೋತಿದೆ. ಈ ಮೂಲಕ, ಉತ್ತರ ಭಾರತದಲ್ಲಿ ಪುಟ್ಟ ರಾಜ್ಯ ಹಿಮಾಚಲ ಪ್ರದೇಶವನ್ನು ಬಿಟ್ಟರೆ ಬೇರೆಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರ ಇಲ್ಲದಂತಾಗಿದೆ. ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ಅತಿ ಆತ್ಮ-ವಿಶ್ವಾಸವು ಕಾಂಗ್ರೆಸ್‌ಗೆ ಮುಳುವಾಗಿದೆ. ‘ಗ್ಯಾರಂಟಿ’ ಭರವಸೆಗಳ ಮೂಲಕ ಕರ್ನಾಟಕದಲ್ಲಿ ಗೆಲುವು ಕಂಡಿರುವ ಕಾಂಗ್ರೆಸ್, ಅದೇ ಕಾರ್ಯತಂತ್ರವನ್ನು ಇತರ ರಾಜ್ಯಗಳಿಗೂ ವಿಸ್ತರಿಸಿತು. ಉಚಿತ ಕೊಡುಗೆಗಳನ್ನು ಖಂಡತುಂಡವಾಗಿ ವಿರೋಧಿಸುತ್ತಿದ್ದ ಬಿಜೆಪಿಯು ಕಾಂಗ್ರೆಸ್ ‘ಗ್ಯಾರಂಟಿ’ಗಳಿಗೆ ಬದಲಾಗಿ ‘ಮೋದಿ ಗ್ಯಾರಂಟಿ’ ಎಂಬ ಅಸ್ತ್ರ ಹೂಡಿತು. ಮತದಾರನು ಕಾಂಗ್ರೆಸ್ ‘ಗ್ಯಾರಂಟಿ’ ಬದಲಿಗೆ ‘ಮೋದಿ ಗ್ಯಾರಂಟಿ’ ಮೇಲೆ ವಿಶ್ವಾಸ ಇರಿಸಿದ್ದನ್ನು ಫಲಿತಾಂಶವು ತೋರಿಸಿಕೊಟ್ಟಿದೆ. ಹಿಂದಿ ಭಾಷಿಕ ಪ್ರದೇಶದ ಮೂರು ರಾಜ್ಯಗಳ ಕಾಂಗ್ರೆಸ್ ನಾಯಕರ ನಡುವೆ ಇದ್ದ ಒಳಜಗಳಗಳನ್ನು ಆ ಕೂಡಲೇ ಬಗೆಹರಿಸದೆ, ಕಾಂಗ್ರೆಸ್ ನಾಯಕತ್ವವು ತೋರಿದ ನಿರಂತರ ಅಸಡ್ಡೆಯು ಆ ಪಕ್ಷಕ್ಕೆ ದುಬಾರಿಯಾಗಿದೆ. ಚುನಾವಣೆಗೆ ಕೆಲ ಕಾಲ ಮೊದಲು ಒಳಜಗಳಕ್ಕೆ ತೇಪೆ ಹಚ್ಚುವ ಕೆಲಸ ನಡೆದರೂ ಅದು ತಳಹಂತದವರೆಗೆ ಇಳಿಯಲಿಲ್ಲ. ರಾಜಕೀಯವು ನಿರಂತರವಾಗಿ ಚಲನಶೀಲವಾಗಿಯೂ ಸೃಜನಶೀಲವಾಗಿಯೂ ಇರಬೇಕು ಎಂಬುದನ್ನು ಮತದಾರ ಬಯಸುತ್ತಾನೆ. ಆದರೆ, ಕಾಂಗ್ರೆಸ್ ಪಕ್ಷವು ಅವೇ ಹಳೆಯ, ವರ್ಚಸ್ಸು ಕಳೆದುಕೊಂಡ ಮುಖಗಳಿಗೇ ಮಣೆ ಹಾಕುವುದನ್ನು ಮುಂದುವರಿಸಿತು. ಯುವ ಚೈತನ್ಯ ಆ ಪಕ್ಷದಲ್ಲಿ ಕಾಣಿಸಲಿಲ್ಲ. ತೆಲಂಗಾಣದಲ್ಲಿ ಸಿಕ್ಕ ಗೆಲುವು ಮಾತ್ರ ಆ ಪಕ್ಷಕ್ಕೆ ಇರುವ ಏಕೈಕ ಸಮಾಧಾನ. ಆಂಧ್ರಪ್ರದೇಶವನ್ನು ವಿಭಜಿಸಿ ತೆಲಂಗಾಣ ರಾಜ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರ ಭಾರತ ರಾಷ್ಟ್ರ ಸಮಿತಿಯು ತೆಲಂಗಾಣವನ್ನು ಕಳೆದುಕೊಂಡಿದೆ. ಪ್ರತ್ಯೇಕ ರಾಜ್ಯ ಹೋರಾಟದ ಕೆಚ್ಚು ಮತ್ತು ಭಾವನೆಗಳ ಆಧಾರದಲ್ಲಿಯೇ ಎರಡು ಅವಧಿಗೆ ಅವರ ಪಕ್ಷವು ಗೆದ್ದಿತ್ತು. ಆದರೆ, ಹೆಚ್ಚುತ್ತಲೇ ಇದ್ದ ನಿರುದ್ಯೋಗಕ್ಕೆ ಪರಿಹಾರ ಕಂಡುಕೊಳ್ಳಲು ಕೆಸಿಆರ್ ಯತ್ನಿಸಲಿಲ್ಲ. ಆಡಳಿತ ಮತ್ತು ಪಕ್ಷದ ಮೇಲೆ ಕೆಸಿಆರ್ ಕುಟುಂಬದ ಬಿಗಿಹಿಡಿತ, ಚುನಾವಣೆ ಸಮೀಪಿಸಿದಾಗ ಪಕ್ಷದ ಹೆಸರು ಬದಲಾಯಿಸಿದ್ದು ಆ ಪಕ್ಷದ ಸೋಲಿಗೆ ಕಾರಣವಾದ ಕೆಲವು ಅಂಶಗಳಾಗಿರಬಹುದು. ಮಧ್ಯಪ್ರದೇಶವೊಂದನ್ನು ಬಿಟ್ಟು ಬೇರೆಲ್ಲಿಯೂ ಆಡಳಿತ ಪಕ್ಷ ಮರಳಿ ಅಧಿಕಾರ ಹಿಡಿದಿಲ್ಲ. ರಾಜಕೀಯ ಪಕ್ಷಗಳು ಮತ್ತು ಅವುಗಳ ಆಳ್ವಿಕೆಯನ್ನು ಮತದಾರ ನಿರಂತರವಾಗಿ ವಿಮರ್ಶೆಗೆ ಒಳಪಡಿಸುತ್ತಲೇ ಇದ್ದಾನೆ ಎಂಬುದನ್ನು ಇದು ದೃಢಪಡಿಸಿದೆ. ಪ್ರಜಾಪ್ರಭುತ್ವ ಹೆಚ್ಚು ಹೆಚ್ಚು ಪ್ರಬುದ್ಧವಾಗಲು ಮತದಾರನ ಈ ಎಚ್ಚರಿಕೆ ಅತ್ಯಂತ ಅಗತ್ಯ.

# ಸಂಪಾದಕೀಯ
# EDITORIAL

## ಸುಶಾಸನಕ್ಕೆ ಸಿಕ್ಕ ಗೆಲುವು

### ಜನಾದೇಶ ಯಾವ ಸಮೀಕ್ಷೆಗೂ ನಿಲುಕದು

**ಮುಂ**ದಿನ ವರ್ಷ 2024ರ ಮೊದಲ ತ್ರೈಮಾಸಿಕ ಮುಕ್ತಾಯದಲ್ಲಿ ನಡೆಯಲಿರುವ ಲೋಕಸಮರಕ್ಕೆ 'ಸೆಮಿಫೈನಲ್' ಎಂದೇ ಪರಿಗಣಿತವಾದ ಪಂಚರಾಜ್ಯಗಳ ಚುನಾವಣೆ ಪೈಕಿ, ನಾಲ್ಕು ರಾಜ್ಯಗಳ ಫಲಿತಾಂಶ ಪ್ರಕಟವಾಗಿದೆ. ಈ ಫಲಿತಾಂಶಗಳು ಒಂದು ರೀತಿಯಲ್ಲಿ ಬಹಳ ಅನಿರೀಕ್ಷಿತ. ವಿವಿಧ ಏಜೆನ್ಸಿಗಳು, ಮತಗಟ್ಟೆ ಸಮೀಕ್ಷೆಗಳು ಹಾಗೂ ರಾಜಕೀಯ ಪಕ್ಷಗಳು ಖಾಸಗಿಯಾಗಿ ನಡೆಸಿದ ಆಂತರಿಕ ಸಮೀಕ್ಷೆಗಳ ಲೆಕ್ಕಾಚಾರ ಮೀರಿ ಫಲಿತಾಂಶ ಪ್ರಕಟವಾಗಿದೆ. ತೆಲಂಗಾಣ ಹೊರತು ಪಡಿಸಿ, ಛತ್ತೀಸ್‌ಗಢ, ರಾಜಸ್ಥಾನ ಹಾಗೂ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಜಿದ್ದಾಜಿದ್ದಿನ ಹೋರಾಟ ನಡೆಯಲಿದೆ ಎಂದೇ ಎಲ್ಲ ಸಮೀಕ್ಷೆಗಳು ಹೇಳಿದ್ದವು. ಆದರೆ, ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಹಾಗೂ ತೆಲಂಗಾಣದಲ್ಲಿ ಕಾಂಗ್ರೆಸ್ 'ಅತಂತ್ರ' ಸ್ಥಿತಿಗೆ ಅವಕಾಶ ನೀಡದಂತೆ ಅಭೂತಪೂರ್ವ ಗೆಲುವು ಸಾಧಿಸಿವೆ. ಜನಾದೇಶ ಎಂಬುದು ಯಾರ ಅಳತೆಗೂ ಸಿಗದ ಸಂಗತಿ ಎಂಬುದು ಮತ್ತೊಮ್ಮೆ ವೇದ್ಯವಾಗಿದೆ.

ಉತ್ತರ ಭಾರತದ ಹೃದಯಭಾಗದಲ್ಲಿರುವ ಮೂರು ರಾಜ್ಯಗಳ ಫಲಿತಾಂಶವಂತೂ ನಿಚ್ಚಳವಾಗಿ ಪ್ರಧಾನಿ ಮೋದಿಯ ಪ್ರಭಾವವನ್ನು ಸಾರಿ ಹೇಳುತ್ತಿವೆ. ಈ ರಾಜ್ಯಗಳಲ್ಲಿ ಮುಂದಿನ ಮುಖ್ಯಮಂತ್ರಿ ಯಾರು ಎಂಬುದನ್ನು ಬಿಜೆಪಿ ಘೋಷಿಸಿರಲಿಲ್ಲ, ಮೋದಿಯ ನಾಮಬಲದ ಮೇಲೇ ಚುನಾವಣೆ ಎದುರಿಸಿತ್ತು. ಹಾಗಾಗಿ, ಜನತೆ ಮೋದಿ ನಾಯಕತ್ವವನ್ನು ಬೆಂಬಲಿಸಿದ್ದಾರೆ ಎಂದೇ ಹೇಳಬೇಕು. ಪ್ರತಿಪಕ್ಷ ಕಾಂಗ್ರೆಸ್ ಅಂತೂ ಮೋದಿಯ ಕಾಲ್ಗುಣವೇ ಸರಿಯಿಲ್ಲ ಎಂದು ಈ ಮೂರು ರಾಜ್ಯಗಳಲ್ಲಿ ಪ್ರಚಾರ ನಡೆಸಿತ್ತು. ಇಂಥಾ ನಕಾರಾತ್ಮಕ ಪ್ರಚಾರವನ್ನು ಜನತೆ ತಿರಸ್ಕರಿಸಿದ್ದಾರೆ.



ಮಧ್ಯಪ್ರದೇಶದಲ್ಲಂತೂ ಆಡಳಿತ ವಿರೋಧಿ ಅಲೆಯ ಭೀತಿಯನ್ನು ಮೀರಿ ಬಿಜೆಪಿ ಐದನೇ ಬಾರಿಗೆ ಗೆಲುವು ಸಾಧಿಸಿದೆ. ಇದು ಸುಶಾಸನಕ್ಕೆ ಸಿಕ್ಕ ಗೆಲುವು ಎಂದೂ ವ್ಯಾಖ್ಯಾನಿಸಬಹುದು. 2018ರಲ್ಲಿ ಕಳೆದುಕೊಂಡಿದ್ದ ರಾಜಸ್ಥಾನ ಮತ್ತು ಛತ್ತೀಸ್‌ಗಢ ಎರಡೂ ರಾಜ್ಯಗಳನ್ನು ಕೇಸರಿ ಪಕ್ಷ ಮತ್ತೆ ಗೆದ್ದಿದೆ. ದಕ್ಷಿಣ ಭಾರತದ ತೆಲಂಗಾಣ ಈ ಬಾರಿ ಕಾಂಗ್ರೆಸ್‌ಗೆ ಒಲಿದಿದೆ. ಈ ಗೆಲುವು ಭಾರತದ ಪುರಾತನ ಪಕ್ಷಕ್ಕೆ ಸಮಾಧಾನ ಕೊಟ್ಟಿದೆ. ಆರು ತಿಂಗಳ ಹಿಂದೆ ಕರ್ನಾಟಕದಲ್ಲಿ ಗ್ಯಾರಂಟಿ ಮಾದರಿಯನ್ನು ಮುಂದಿಟ್ಟುಕೊಂಡು ಅಭೂತಪೂರ್ವ ಗೆಲುವು ಸಾಧಿಸಿದ ಕಾಂಗ್ರೆಸ್, ನೆರೆಯ ರಾಜ್ಯದಲ್ಲೂ ಅದೇ ಮಾದರಿಯ ಭರವಸೆ ನೀಡಿ, ಅಧಿಕಾರ ಚುಕ್ಕಾಣಿ ಹಿಡಿದಿದೆ. ಕಳೆದ ಚುನಾವಣೆಯಲ್ಲಿ ಕೇವಲ 1 ಸೀಟು ಗೆದ್ದಿದ್ದ ಬಿಜೆಪಿ ಈ ಬಾರಿ 8 ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿರುವುದು ಗಮನಾರ್ಹ. ಕಾಂಗ್ರೆಸ್ ಇಲ್ಲಿ ಸ್ಥಳೀಯ ಹಾಗೂ ಯುವ ನಾಯಕತ್ವಕ್ಕೆ ಹೆಚ್ಚು ಒತ್ತು ನೀಡಿತು. ಆದರೆ, ಸೋಲು ಕಂಡಿರುವ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಯುವ ನಾಯಕತ್ವದ ಬದಲು, ಸಂಜಯ್ ಗಾಂಧಿ ಕಾಲದ ಹಿರಿಯ ತಲೆಯಾಳುಗಳಿಗೆ ಮಣೆ ಹಾಕಿತ್ತು. ಭಾರತದ ಚುನಾವಣಾ ರಂಗದಲ್ಲಿ 40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮತದಾರರು ಶೇ.50ರಷ್ಟಿದ್ದು, ಅವರ ಆಸೆ- ಆಕಾಂಕ್ಷೆಗಳನ್ನು, ಯುವ ಪೀಳಿಗೆ ಬಯಸುವ ನಾಯಕತ್ವವನ್ನು ಕಾಂಗ್ರೆಸ್ ಮರೆತಿತೇ? ಇದನ್ನು ಆ ಪಕ್ಷ ಗಂಭೀರವಾಗಿ ಯೋಚಿಸಲೇಬೇಕಿದೆ.

ರಾಜ್ಯ ರಚನೆಯ ಹತ್ತು ವರ್ಷಗಳ ಕಾಲ ತೆಲಂಗಾಣದಲ್ಲಿ ಆಳ್ವಿಕೆ ನಡೆಸಿದ ಬಿಆರ್‌ಎಸ್ ಆಡಳಿತ ವಿರೋಧಿ ಅಲೆಗೆ ಸಿಲುಕಿ ಸೋತು ಹೋಗಿದೆ. ಈ ಎಲ್ಲ ರಾಜ್ಯಗಳಲ್ಲೂ 'ಗ್ಯಾರಂಟಿ' ಎಂದೇ ಹೆಸರು ಪಡೆದಿರುವ ಉಚಿತ ಯೋಜನೆಗಳು ಪರಿಣಾಮ ಬೀರಿರುವುದು ಗೋಡೆ ಬರಹದಷ್ಟೇ ಸ್ಪಷ್ಟ. ಯಾರು ಏನೇ ಹೇಳಲಿ, ಕೋವಿಡ್ ಬಳಿಕ ದೇಶದಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರ ಬದುಕು ತುಸು ದುಸ್ತರವಾಗಿರುವುದು ಸುಳ್ಳಲ್ಲ. ಇದನ್ನು ಮನಗಂಡ ಕಾಂಗ್ರೆಸ್ ಕರ್ನಾಟಕದಲ್ಲಿ ಘೋಷಿಸಿದ ಗ್ಯಾರಂಟಿ ಯೋಜನೆಗಳು ಆ ಪಕ್ಷಕ್ಕೆ ಆಸರೆಯಾದವು. ಅದನ್ನೇ ಕಾಂಗ್ರೆಸ್ ಎಲ್ಲೆಡೆ ವಿಸ್ತರಿಸಿತು. ಆದರೆ, ಈ ಯೋಜನೆಗಳ ಕುರಿತು ತಕರಾರು ವ್ಯಕ್ತಪಡಿಸುತ್ತಲೇ ಬಂದಿದ್ದ ಬಿಜೆಪಿ, ಪಂಚರಾಜ್ಯ ಚುನಾವಣೆ ಹೊತ್ತಲ್ಲಿ ಗ್ಯಾರಂಟಿ ಯೋಜನೆಗಳಿಗೆ ಜೈ ಎಂದಿತು. ತೆಲಂಗಾಣದಲ್ಲಿ ಬಿಆರ್‌ಎಸ್ ಕೂಡ ಸ್ಪರ್ಧೆಗೆ ಬಿದ್ದಂತೆ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿತು. ಅಂತಿಮವಾಗಿ ಗ್ಯಾರಂಟಿ ಘೋಷಿಸಿದ ಪಕ್ಷಗಳ ಪೈಕಿ, ಹೆಚ್ಚು ವಿಶ್ವಾಸಾರ್ಹ ಪಕ್ಷಗಳಿಗೆ ಜಯ ಸಂದಿದೆ ಎಂದೇ ಫಲಿತಾಂಶವನ್ನು ವ್ಯಾಖ್ಯಾನಿಸಬಹುದು. ಜನತೆಗೆ ಗ್ಯಾರಂಟಿ ಯೋಜನೆಗಳು ಅನಿವಾರ್ಯವೇ? ಇದರ ಪರ- ವಿರುದ್ಧವಿರುವ ರಾಜಕೀಯ ಪಕ್ಷಗಳು ಸೇರಿದಂತೆ ಎಲ್ಲರೂ ಯೋಚಿಸಬೇಕಿದೆ. ಚುನಾವಣೆಯಲ್ಲಿ ಸೋಲು-ಗೆಲುವು ಇದ್ದದ್ದೆ. ಹಿಂದಿ ರಾಜ್ಯಗಳನ್ನು ಗೆಲ್ಲುತ್ತಿರುವ ಬಿಜೆಪಿ ದಕ್ಷಿಣದಲ್ಲಿ ಗೆಲ್ಲುತ್ತಿಲ್ಲವೇಕೆ? ಅಂತೆಯೇ, ಕರ್ನಾಟಕ, ತೆಲಂಗಾಣ ಗೆದ್ದ ಕಾಂಗ್ರೆಸ್ ಉತ್ತರದ ರಾಜ್ಯಗಳಲ್ಲಿ ಸೋಲುತ್ತಿರುವುದು ಏಕೆ? ಬಿಆರ್‌ಎಸ್‌ನಂಥ ಪ್ರಾದೇಶಿಕ ಪಕ್ಷ ಎಡವಿದ್ದೆಲ್ಲಿ? ಆತ್ಮಾವಲೋಕನ ನಡೆಯಬೇಕಿದೆ.

# ಕರ್ನಾಟಕದ ಗ್ಯಾರಂಟಿ ತೆಲಂಗಾಣದಲ್ಲಿ ಫಲಕಾರಿ

ಕರ್ನಾಟಕದಲ್ಲಿ ಕಾಂಗ್ರೆಸ್ 5 ಉಚಿತ ಯೋಜನೆಗಳನ್ನು ಘೋಷಿಸಿ ಅಧಿಕಾರಕ್ಕೆ ಬಂದಂತೆ ತೆಲಂಗಾಣದಲ್ಲೂ ಅಧಿಕಾರ ಪಡೆಯಲು ಸಾಧ್ಯವಾಗಿದೆ. ತೆಲಂಗಾಣದ ಮತದಾರರು ಕರ್ನಾಟಕದವರನ್ನು ನೋಡಿ ಅದನ್ನೇ ಮಾದರಿಯಾಗಿ ಸ್ವೀಕರಿಸಿದ್ದಾರೆ. ಮೋದಿ ಕಡೆಗಣಿಸಿದ್ದು ಬೆಲೆಏರಿಕೆ ಮತ್ತು ನಿರುದ್ಯೋಗ. ಈಗ ಕಾಂಗ್ರೆಸ್ ಅದಕ್ಕೆ ಮಹತ್ವ ನೀಡಲಿದೆ. ಜಾತಿ ಸಮೀಕ್ಷೆಗೆ ಎಲ್ಲ ಕಡೆ ಬೇಡಿಕೆ ಬರುತ್ತಿದೆ. ಮೋದಿ ಅದನ್ನು ಒಪ್ಪುತ್ತಿಲ್ಲ. ಬಿಜೆಪಿಯ ನಿಜವಾದ ಬಣ್ಣ ಬಯಲಾಗುತ್ತಿದೆ. ಅಕ್ರಮಗಳು ಬಹಿರಂಗಗೊಳ್ಳುತ್ತಿದೆ. 5 ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶವನ್ನು ಮುಂದಿನ ಲೋಕಸಭೆ ಚುನಾವಣೆಗೆ ದಿಕ್ಸೂಚಿ ಎಂದು ಪರಿಗಣಿಸಬೇಕಿಲ್ಲ 2018 ಮತ್ತು 2019 ರ ಚುನಾವಣೆಗಳು ಇನ್ನೂ ನಮ್ಮ ನೆನಪಿನಲ್ಲಿ ಹಚ್ಚಹಸಿರಾಗಿದೆ.

ಛತ್ತೀಸಗಢದಲ್ಲಿ ಬಿಜೆಪಿ ಹಿಂದೆ ಆಡಳಿತ ನಡೆಸಿತ್ತು. ಆಗ ಬಡತನ ಅಧಿಕಗೊಂಡಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅದು ಭತ್ತದ ಕಣಜವಾಯಿತು. ತಲಾವಾರು ಆದಾಯ 88793 ರೂ ಇದ್ದದ್ದು 133897 ರೂ. ಆಯಿತು. 40 ಲಕ್ಷ ಜನ ಬಡತನದಿಂದ ಹೊರಬಂದರು. ಈಗ ಮತ್ತೆ ಚುನಾವಣೆಯಲ್ಲಿ ಮೋದಿಯ ಮುಖ ತೋರಿಸಿ ಬಿಜೆಪಿ ಮತ ಪಡೆಯುತ್ತಿದೆ. ಮಧ್ಯಪ್ರದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಹಣಾಹಣಿ ಹೋರಾಟ ನಡೆಸಿದೆ.



ಅರ್ಥ–ವ್ಯಾಪ್ತಿ

ಪಿ.ಚಿದಂಬರಂ
ಕೇಂದ್ರದ ಮಾಜಿ ಸಚಿವರು

ರಾಜಸ್ಥಾನದೇ ಬೇರೆ ಕತೆ. ಅಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ಸರ್ಕಾರ ಬದಲಾಗುತ್ತಿದೆ. ಜನ ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸುತ್ತಾರೆ. ಅವರ ಅಗ್ನಿಪರೀಕ್ಷೆ ಎಲ್ಲ ಸರ್ಕಾರಗಳೂ ಒಳಗಾಗಲೇಬೇಕು. ಪಕ್ಷೇತರರದೇ ಪ್ರಾಬಲ್ಯ. ಇವರು ಬಹುತೇಕ ಪ್ರಮುಖ ಪಕ್ಷಗಳಲ್ಲಿ ಟಿಕೆಟ್‌ಗೆ ಪ್ರಯತ್ನಿಸಿ ಸಿಗದೇ ಪಕ್ಷೇತರರಾಗಿ ಸ್ಪರ್ಧಿಸಿದವರು. ಈಗ ಫಲಿತಾಂಶ ಬಂದಿದೆ. ಇನ್ನೂ ನಡೆಯುವ ನಾಟಕಗಳೇ ಬೇರೆ.

ತೆಲಂಗಾಣ ಫಲಿತಾಂಶವೇ ಬೇರೆ. ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಅವರನ್ನು ಜನ ಫಾರಂ ಹೌಸ್ ಸಿಎಂ ಎಂದು ಕರೆಯುತ್ತಾರೆ. ಇಡೀ ಕುಟುಂಬವೇ ಸರ್ಕಾರವನ್ನು ನಡೆಸುತ್ತದೆ. ಅದೇ ಈಗ ದೌರ್ಬಲ್ಯವಾಗಿದೆ.

ಕಾಂಗ್ರೆಸ್ ಪಕ್ಷ ರೇವಂತ್ ರೆಡ್ಡಿ ನೇತೃತ್ವದಲ್ಲಿ ತಲೆಎತ್ತಿದೆ. ಕಾಂಗ್ರೆಸ್‌ಗೆ ಗ್ರಾಮೀಣ ಯುವಕರ ಬೆಂಬಲ ಶ್ರೀರಕ್ಷೆಯಾಗಿದೆ. ಎಐಎಂಐಎಂ ಮತ್ತು ಬಿಜೆಪಿ ಅಲ್ಪಸ್ವಲ್ಪ ಸ್ಥಾನಗಳನ್ನು ಗಳಿಸಬಹುದು. ಕರ್ನಾಟಕದ ಪ್ರಭಾವ ಎದ್ದು ಕಂಡು ಬರುತ್ತಿದೆ. ಕರ್ನಾಟಕದ ನಾಯಕರು ತೆಲಂಗಾಣ ಶಾಸಕರ ರಕ್ಷಣೆಗೆ ಕಂಕಣಬದ್ಧರಾಗಿದ್ದಾರೆ. ಹೀಗಾಗಿ ತೆಲಂಗಾಣ ಹೊಸ ಬದಲಾವಣೆ ಕಾಣುವ ಹಂತದಲ್ಲಿದೆ.

ಮಿಜೋರಾಂನಲ್ಲಿ ರಾಜಕೀಯವೇ ಬೇರೆ. ಎರಡೂ ಸ್ಥಳೀಯ ಪಕ್ಷಗಳು. ಕುಕಿ ಮತ್ತು ಜೋಮೊಸ್ ನಡುವೆ ಹೋರಾಟ. ಕುಕಿಗಳ ವಲಸೆ ಈಗ ಬಹು ದೊಡ್ಡ ಸಮಸ್ಯೆ. ಇದನ್ನು ಮನಗಂಡ ಮೋದಿ ಅಲ್ಲಿಗೆ ಭೇಟಿಕೊಟ್ಟಿಲ್ಲ. ಮಣಿಪುರಕ್ಕಂತೂ ಮೇ ತಿಂಗಳಿನಿಂದ ಕಾಲಿಟ್ಟಿಲ್ಲ.

ಇಲ್ಲಿ ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಪಕ್ಷವನ್ನು ಬೆಂಬಲಿಸುತ್ತದೆ. ಅದರಿಂದ ರಾಷ್ಟೀಯ ಮಟ್ಟದಲ್ಲಿ ಮಿಜೋರಾಂ ಪಾತ್ರ ಕಡಿಮೆ. 5 ರಾಜ್ಯಗಳ ಚುನಾವಣೆ ಫಲಿತಾಂಶ 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸವಾಲು ಹಾಕುವವರು ಯಾರು ಎಂಬುದನ್ನು ಜನ ತೀರ್ಮಾನಿಸಬೇಕಿದೆ.

ರಾಜ್ಯ ವಿಧಾನಸಭೆ ಚುನಾವಣೆಗೂ ಲೋಕಸಭೆ ಚುನಾವಣೆಗೂ ಬಹಳ ಅಂತರ ಇದೆ. ಜನ ರಾಷ್ಟ್ರೀಯ ಸಮಸ್ಯೆ ಬಂದಾಗ ನೋಡುವ ರೀತಿಯೇ ಬೇರೆ. ರಾಜ್ಯದ ಪ್ರಶ್ನೆ ಬಂದಾಗ ನೋಡುವ ದೃಷ್ಟಿಕೋನವೇ ಬೇರೆ.

ಇಂದಿನಿಂದ ಲೋಕಸಭೆ ಚುನಾವಣೆಯ ಬಗ್ಗೆ ಮುಕ್ತ ಆರಂಭಗೊಳ್ಳುತ್ತದೆ. 5 ರಾಜ್ಯಗಳ ಚುನಾವಣೆ ಫಲಿತಾಂಶ ಅದಕ್ಕೆ ನಾಂದಿ ಹಾಡಲಿದೆ. ಕೇಂದ್ರ ಸರ್ಕಾರ ಇದುವರೆಗೆ ಮಾಡಿರುವ ಸಾಧನೆ ಏನು? ಮುಂದಿನ ದಿನಗಳು ಹೇಗಿರುತ್ತದೆ ಎಂಬುದನ್ನು ಮತದಾರರು ಕೂಲಂಕಷವಾಗಿ ಪರಿಶೀಲಿಸುವರು. ■

CENTRAL UNIVERSITY OF KARNATAKA

## Any Feedback

**Contact Us**

# Central Library

08477-226717

librarian@cuk.ac.in

http://cuklibrary.ac.in/index.html

**Central University of Karnataka, Kalaburagi-585367,India**